# ಗ್ರಾಮಭಾರತಿ ವಿದ್ಯಾ ಸಂಸ್ಥೆ (ರಿ).,

## ಮೈಸೂರು-ಚನ್ನರಾಯಪಟ್ಟಣ ರಸ್ತೆ

## ಕೃಷ್ಣರಾಜಪೇಟೆ

## ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

# ಶೈಕ್ಷಣಿಕ ಸಂಭ್ರಮ

# 2023

ಪ್ರಧಾನ ಸಂಪಾದಕರು
ಎಸ್.ಸಿ.ಕಿರಣ್‌ಕುಮಾರ್

ಸಂಪಾದಕರು
ಕೆ.ಎನ್.ಗಂಗಾಧರ

**ಪ್ರಥಮ ವಾರ್ಷಿಕ ಸಂಚಿಕೆ - 2023**

'SHAIKSHANIKA ṢAMBRAMA' YEAR BOOK -2023
BY S.M.LINGAPPA COLLEGE OF EDUCATION

Published by Gramabharathi Vidya Samsthe (R).,
and Shri S.M.Lingappa Charitable Trust (R).,

| | | |
|---|---|---|
| First impression | : | 2024 |
| Pages | : | 88 |
| Paper | : | 80 GSM, 1/8 Demy |
| Price | : | Rs.100 |
| Copy Right | : | S.C.KIRAN KUMAR |
| Copies | : | 200 |
| Printing | : | Gramabhrathi Graphics<br>Krishnarajapete |
| Published by | : | Gramabharathi Education Society<br>Shri S M Lingappa Charitable<br>Trust (R)., Krishnarajapete<br>Mandya District - 571426<br>Mobile No: 9242877708 |

## ಪರಿವಿಡಿ


1. ಸಂಸ್ಥೆಯ ಸಂಸ್ಥಾಪಕರುಗಳು ಮತ್ತು ಅಭಿವೃದ್ಧಿಯ ಹರಿಕಾರರು – 5
2. ಆಡಳಿತ ಮಂಡಳಿ ಸದಸ್ಯರುಗಳು – 6
3. ಉಪನ್ಯಾಸಕ ವರ್ಗ – 7
4. ಸಂದೇಶಗಳು – 8
5. ಕಾಲೇಜಿನ ವಿವಿಧ ಸಮಿತಿಗಳು ಮತ್ತು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು – 13
6. ದ್ವಿತೀಯ ಬಿ.ಇಡಿ.ಪ್ರಶಿಕ್ಷಣಾರ್ಥಿಗಳ ಗುಂಪು ಛಾಯಾಚಿತ್ರ – 16
7. 2022–23ನೇ ಸಾಲಿನಲ್ಲಿ ದ್ವಿತೀಯ ಬಿ.ಇಡಿ.ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಶಿಕ್ಷಣಾರ್ಥಿಗಳ ಭಾವಚಿತ್ರ – 17
8. 2023ರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿ – 21


## ಜ್ಞಾನಲೋಕ

## ನವಮನದ ಮಾತು ಫಲಕದಲ್ಲಿ ಪ್ರಕಟಗೊಂಡ ಆಯ್ದ ಲೇಖನಗಳು


8. ಕನ್ನಡ ವಿಭಾಗ – 51
9. ಆಂಗ್ಲ ವಿಭಾಗ – 77
10. ಚಿತ್ರ ಕಲೆ ವಿಭಾಗ – 86

# ಸಂಸ್ಥೆಯ ಸಂಸ್ಥಾಪಕರುಗಳು ಮತ್ತು ಅಭಿವೃದ್ಧಿಯ ಹರಿಕಾರರು



ಸಾಹುಕಾರ್ ಎಸ್.ಕೆ. ಚಿಕ್ಕಣ್ಣಗೌಡರು
1900 - 25-08-1975



ಎಸ್.ಎಂ. ಲಿಂಗಪ್ಪನವರು
18-12-1918 30-08-1990



ಎಸ್.ಸಿ.ಚಿಕ್ಕಣ್ಣಗೌಡರು(ರಾಜಣ್ಣ)
05-12-1946 18-12-2007

# ಗ್ರಾಮಭಾರತಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು



**ಶ್ರೀ ಎಸ್.ಸಿ.ಕಿರಣ್‌ಕುಮಾರ್‌ರವರು**
ಅಧ್ಯಕ್ಷರು
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.



**ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮರವರು**
ಕಾರ್ಯದರ್ಶಿ
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.



**ಶ್ರೀ ಬಿ.ಎಸ್.ಚಂದ್ರಶೇಖರ್‌ರವರು**
ನಿರ್ದೇಶಕರು
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.



**ಶ್ರೀಮತಿ ಕೌಸಲ್ಯರವರು**
ನಿರ್ದೇಶಕರು
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.



**ಶ್ರೀ ಎಲ್.ವಿ.ನಾಗೇಶ್‌ರವರು**
ನಿರ್ದೇಶಕರು
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.




**ಶ್ರೀ ಎಸ್.ಟಿ.ಶ್ರೀನಿವಾಸ್‌ರವರು**
ನಿರ್ದೇಶಕರು
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.



**ಶ್ರೀ ಎ.ಎನ್.ಬಾಲಚಂದ್ರರವರು**
ನಿರ್ದೇಶಕರು
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.



**ಶ್ರೀ ಪರಮೇಶ್‌ರವರು**
ನಿರ್ದೇಶಕರು
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.



**ಶ್ರೀ ರುದ್ರೇಶ್‌ರವರು**
ನಿರ್ದೇಶಕರು
ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ)
ಕೃಷ್ಣರಾಜಪೇಟೆ.

# ಬೋಧಕ ವೃಂದ, ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ



ಎಡದಿಂದ ಬಲಕ್ಕೆ: ಸ್ವಾತಿ.ಎಸ್., ಗಂಗಾಧರ್.ಕೆ.ಎನ್.,ಸತೀಶ್.ಎಂ.ವಿ., ಮಹಾಲಿಂಗ.ಕೆ., ಸುರೇಶ.ಪಿ., ಮಹದೇವಸ್ವಾಮಿ.ಎಸ್., ಶಿವಕುಮಾರ್.ಕೆ.ಎಸ್., ಮತ್ತು ಮಣಿ

# ಅಧ್ಯಕ್ಷರ ಮಾತು



**ಎಸ್.ಸಿ.ಕಿರಣ್ ಕುಮಾರ್** ಬಿ.ಎಸ್‌ಸಿ., ಎಲ್.ಎಲ್.ಬಿ.

ಸ್ವಾತಂತ್ರ್ಯಾ ನಂತರ ಮಂಡ್ಯ ಜಿಲ್ಲೆ ಕಂಡಂತಹ ಅಪರೂಪದ ರಾಜಕಾರಣಿ, ಉತ್ತಮ ಸಹಕಾರಿ, ಶಿಕ್ಷಣ ತಜ್ಞ ಕೃಷ್ಣರಾಜಪೇಟೆ ತಾಲ್ಲೂಕಿನ ಪ್ರಪ್ರಥಮ ಶಾಸಕ ಶೀಲವಂತ ರಾಜಕಾರಣಿ ದಿ.ಎಸ್.ಎಂ.ಲಿಂಗಪ್ಪನರು. ಗ್ರಾಮೀಣ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯು  ಗುಣಮಟ್ಟದ ಶಿಕ್ಷಣದಿಂದ ಮಾತ್ರ ಸಾಧ್ಯವೆಂದು ಬಲವಾದ ನಂಬಿಕೆಯಿಂದ ದಿನಾಂಕ 21.10.1974 ರಂದು ಗ್ರಾಮಭಾರತಿ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ  ವತಿಯಿಂದ ಅಂದಿನ ಕಾಲಘಟ್ಟಕ್ಕೆ ತಾಲ್ಲೂಕು ಕೇಂದ್ರದಲ್ಲಿ ಗ್ರಾಮೀಣ ಮಕ್ಕಳಿಗೆ ಪ್ರೌಢ ಶಿಕ್ಷಣಕ್ಕೆ ಸರಿಯಾದ ವಸತಿ ಸಹಿತ ಪ್ರೌಢಶಾಲೆಯಿಲ್ಲದ್ದನ್ನು ಮನಗಂಡ ಲಿಂಗಪ್ಪನವರು ಗ್ರಾಮಭಾರತಿ ಪ್ರೌಢಶಾಲೆಯನ್ನು 1975–76 ನೇ ಸಾಲಿನಿಂದ ಪ್ರಾರಂಭಿಸಿದರು. ಅಂದು ಸಂಸ್ಥೆಗೆ ಸ್ವಂತ ಕಟ್ಟಡವಿಲ್ಲದ್ದರಿಂದ ಒಕ್ಕಲಿಗರ ವಿದ್ಯಾರ್ಥಿ ನಿಲಯದ (ಈಗಿನ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ) ಕಟ್ಟಡದಲ್ಲಿ ಪ್ರಾರಂಭವಾಯಿತು. ಎಸ್.ಎಂ.ಲಿಂಗಪ್ಪನವರು ಬ್ರಹ್ಮಚಾರಿಗಳಾಗಿದ್ದು ತಮ್ಮ ಜೀವನದ ಕೊನೆ ಉಸಿರಿರುವವರೆಗೆ ಮಕ್ಕಳೊಂದಿಗೆ ಹಾಸ್ಟೆಲ್‌ನಲ್ಲಿಯೇ ವಾಸವಾಗಿದ್ದರು. ಇವರು ದಿನಾಂಕ 30–08–1990 ರಂದು  ನಿಧನ ಹೊಂದುತ್ತಾರೆ.

ಅವರ ನಂತರ ಸಂಸ್ಥೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು ಎಸ್.ಎಂ. ಲಿಂಗಪ್ಪನವರ ಜೀವನದಲ್ಲಿ ತಂದೆಯಾಗಿ, ಗುರುವಾಗಿ, ಮಾರ್ಗದರ್ಶಕರಾಗಿದ್ದ ಅವರ ದೊಡ್ಡಪ್ಪನ ಮಗ ಶೀಳನೆರೆ ಸಾಹುಕಾರ್ ಎಸ್.ಕೆ.ಚಿಕ್ಕಣ್ಣಗೌಡರ ಕಿರಿಯ ಪುತ್ರ ನಿಷ್ಠುರ ರಾಜಕಾರಣಿ, ಸಹಕಾರ ರತ್ನ ಹಾಗೂ ಶಿಕ್ಷಣ ತಜ್ಞ ಎಸ್.ಸಿ.ಚಿಕ್ಕಣ್ಣಗೌಡರು. ಇವರು ಸಂಸ್ಥೆಯ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಸಂಸ್ಥೆಗೆ ಮೈಸೂರು–ಚೆನ್ನರಾಯಪಟ್ಟಣ ಮುಖ್ಯರಸ್ತೆಯಲ್ಲಿ ಸ್ವಂತ ಕಟ್ಟಡವನ್ನು ಕಟ್ಟಿಸಿದರು. 1996 ರಲ್ಲಿ ಗ್ರಾಮಭಾರತಿ ವಿದ್ಯಾಸಂಸ್ಥೆಯನ್ನು ತನ್ನ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.

ಪ್ರೌಢಶಾಲೆಯನ್ನು ಹೊಂದಿದ್ದ ಗ್ರಾಮಭಾರತಿ ವಿದ್ಯಾಸಂಸ್ಥೆ ವತಿಯಿಂದ 1998ರಲ್ಲಿ ಹಿರಿಯ ಪ್ರಾಥಮಿಕ ಶಾಲೆ, 2002 ರಲ್ಲಿ ಪ್ರಾಥಮಿಕ ಶಾಲೆ, 2005 ರಲ್ಲಿ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜು, ಎಸ್.ಎಂ.ಲಿಂಗಪ್ಪ ಡಿ.ಇಡಿ. ಕಾಲೇಜು, ಎಸ್.ಎಂ.ಲಿಂಗಪ್ಪ ಬಿ.ಇಡಿ. ಕಾಲೇಜುಗಳನ್ನು ತೆರೆಯುವುದರ ಮೂಲಕ ಸಂಸ್ಥೆಯು ಕೃಷ್ಣರಾಜಪೇಟೆಯ ಖಾಸಗಿ ಶಿಕ್ಷಣ ಸಂಸ್ಥೆಗಳ ಹಿರಿಯಣ್ಣನೆನಿಸಿತು. ಸಂಸ್ಥೆಯ ಅಭಿವೃದ್ಧಿಯಲ್ಲಿ ಎಸ್.ಸಿ.ಚಿಕ್ಕಣ್ಣಗೌಡರ ಪಾತ್ರ ಅವಿಸ್ಮರಣೀಯವಾದುದು. ಇವರು 2007 ಡಿಸೆಂಬರ್ 18 ರಂದು ನಿಧನ ಹೊಂದುತ್ತಾರೆ. ಇವರೂ ಸಹ ತಮ್ಮ ಜೀವಿತದ ಕೊನೆ ಕ್ಷಣದವರೆಗೂ ಸಂಸ್ಥೆಯ ಸೇವೆಯನ್ನು ಸಲ್ಲಿಸಿರುವುದು ವಿಶೇಷ.

ಪ್ರಸ್ತುತ ಎಸ್.ಸಿ.ಚಿಕ್ಕಣ್ಣಗೌಡರ ಮಗನಾದ ಎಸ್.ಸಿ.ಕಿರಣ್ ಕುಮಾರ್ ಆದ ನಾನು ಸಂಸ್ಥೆಯ ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತೇನೆ. ಪ್ರಸ್ತುತ ಸಂಸ್ಥೆಯಲ್ಲಿ 1350 ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡುತ್ತಿದ್ದು, 70 ಜನ ವಿವಿಧ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ ಪ್ರಾರಂಭವಾಗಿ 18 ವಸಂತಗಳನ್ನು ಪೂರೈಸಿ 19ನೇ ವರ್ಷಕ್ಕೆ ಕಾಲಿರಿಸಿರುವ ಈ ಸುಸಂದರ್ಭದಲ್ಲಿ ವಾರ್ಷಿಕ ಸಂಚಿಕೆಯನ್ನು ಹೊರತರಲು ಕಾಲೇಜಿನ ಪ್ರಾಚಾರ್ಯರು ಹಾಗು ಸಹಪ್ರಾಧ್ಯಾಪಕರುಗಳೊಂದಿಗೆ ಚರ್ಚಿಸಿ ತೀರ್ಮಾನಿಸಿದೆವು. ಅದರ ಜವಾಬ್ದಾರಿಯನ್ನು ಕನ್ನಡ ಉಪನ್ಯಾಸಕರಾದ ಶ್ರೀಯುತ ಗಂಗಾಧರ್.ಕೆ.ಎನ್. ಅವರಿಗೆ ವಹಿಸಲಾಯಿತು.

ಈ ವಾರ್ಷಿಕ ಸಂಚಿಕೆಯ ಜವಾಬ್ದಾರಿಯನ್ನು ಹೊತ್ತ ಗಂಗಾಧರ್ ಅವರು ತಮ್ಮ ವೈಯಕ್ತಿಕ ಬದುಕಿನ ಜಂಜಾಟಗಳಿಂದ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದ ಕಾರಣ ಇದರ ಸಂಪೂರ್ಣ ಜವಾಬ್ದಾರಿಯನ್ನು ನಾನೇ ಹೊರಬೇಕಾಯಿತು. ಗಂಗಾಧರ್ ಅವರನ್ನು ಜೊತೆಯಲ್ಲಿ ಕೂರಿಸಿಕೊಂಡು ಅವರಿಂದ ಮಾಹಿತಿಗಳನ್ನು ಪಡೆದು ಈ ಕೃತಿಯನ್ನು ಹೊರತರುವುದು ಬಹಳ ತ್ರಾಸವಾಯಿತು. ಗಂಗಾಧರ್ ಅವರಿಗೆ ಅನುಭವದ ಕೊರತೆ ಇರುವುದು ಎದ್ದು ಕಾಣುತ್ತಿತ್ತು. ಆದರೆ ಕೃತಿಯ ಮುದ್ರಣ ರೂಪಕ್ಕೆ ಬೇಕಾದ ಎಲ್ಲಾ ಸಹಕಾರವನ್ನು ಆನಂತರದಲ್ಲಿ ನೀಡಿದ್ದಾರೆ.

ಈ ಸಂಚಿಕೆಯು ಏನೇನನ್ನು ಒಳಗೊಳ್ಳಬೇಕು ಎಂದು ನಿರ್ಧರಿಸಿ, ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವಂತೆ ಮಾರ್ಗದರ್ಶನ ನೀಡುವಲ್ಲಿ ಹಾಗೂ ಇತರೆ ಸಹ ಪ್ರಾಧ್ಯಾಪಕರುಗಳಿಂದ ಕೆಲಸ ತೆಗೆಯುವಲ್ಲಿ ನಮ್ಮ ಪ್ರಾಂಶುಪಾಲರು ವಿಫಲರಾಗಿದ್ದಾರೆ. ಇವರುಗಳನ್ನು ನಂಬಿದರೆ ಈ ವರ್ಷವೂ ವಾರ್ಷಿಕ ಸಂಚಿಕೆಯನ್ನ ಹೊರತರಲಾಗುವುದಿಲ್ಲ ಎಂದು ಅರಿತು, ಖುದ್ದು ನಾನೇ ಡಿ.ಟಿ.ಪಿ. ಕಾರ್ಯದಿಂದಿಡಿದು ಮುದ್ರಣದ ಜವಾಬ್ದಾರಿಯನ್ನು ನಿರ್ವಹಿಸಬೇಕಾಯಿತು. ಆದುದರಿಂದ ಇಲ್ಲಿ ನಾನು ಅಧ್ಯಕ್ಷೀಯ ನುಡಿಯೊಂದಿಗೆ, ಸಂಪಾದಕರ ನುಡಿ ಮತ್ತು ಪ್ರಕಾಶಕರ ನುಡಿಗಳನ್ನು ಒಟ್ಟಿಗೆ ಸೇರಿಸಿದ್ದೇನೆ. ಆದರೆ ಒಂದು ಸಮಾಧಾನದ ವಿಷಯವೆಂದರೆ, ಗಂಗಾಧರ್ ಅವರು ಕೊನೆಯಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡು ಮುಂದಿನ ವರ್ಷದಲ್ಲಿ ನಾನು ನನ್ನ ತಪ್ಪನ್ನು ತಿದ್ದಿಕೊಂಡು ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತೇನೆಂದು ಮಾತು ನೀಡಿದರು.

ನನ್ನ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ನಾನು ವೈಯಕ್ತಿಕವಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಜ್ಞಾನವೆಂಬುದು ನದಿ ಇದ್ದಂತೆ ನಿರಂತರ ಹರಿಯುತ್ತಿರುತ್ತದೆ. ಕಾಲಕ್ಕೆ ತಕ್ಕಂತೆ ನಮ್ಮನ್ನು ಅಪ್ಡೇಟ್ ಮಾಡಿಕೊಳ್ಳದಿದ್ದರೆ ಮಕ್ಕಳ ಮುಂದೆ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ ಎಚ್ಚರಿಕೆ. ವಯಸ್ಸಾಯಿತು ನಮಗೇಕೆಂದು ಸುಮ್ಮನಾಗುವ ಬದಲು, ಪ್ರತಿನಿತ್ಯ ಕಲಿಕೆಯಲ್ಲಿ ತೊಡಗುವುದರಿಂದ ನಿಮಗೂ ಒಳ್ಳೆಯದು ಹಾಗೂ ಸಂಸ್ಥೆಗೂ ಒಳ್ಳೆಯದು.

ಈ ವಾರ್ಷಿಕ ಸಂಚಿಕೆಯನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಭಾಗವು ಆಡಳಿತ ಮಂಡಳಿ, 2023ನೇ ಶೈಕ್ಷಣಿಕ ಸಾಲಿನ ಕಾಲೇಜಿಗೆ ಸಂಬಂದಿಸಿದ ವಿವರಗಳು, ರಚಿಸಿದ ಸಮಿತಿಗಳು, ಜರುಗಿದ ಕಾರ್ಯಕ್ರಮಗಳ ಪಕ್ಷಿನೋಟ ವನ್ನೊಳಗೊಂಡಿದೆ. ಎರಡನೆ ಭಾಗವು ವಿದ್ಯಾರ್ಥಿಗಳ ಲೇಖನಗಳು, ಚಿತ್ರಕಲೆ ಹಾಗೂ ಇತರೆ ಬರಹಗಳನ್ನು ಒಳಗೊಂಡಿದೆ. ಒಟ್ಟಾರೆಯಾಗಿ ಈ ಶೈಕ್ಷಣಿಕ ಸಂಭ್ರಮವು ಒಂದು ವಾರ್ಷಿಕ ಸಂಚಿಕೆಯು ಒಳಗೊಂಡಿರಬೇಕಾದ ಎಲ್ಲಾ ಅಂಶಗಳನ್ನು ಒಳಗೊಂಡಿದೆ ಎಂದರೆ ತಪ್ಪಾಗಲಾರದು. ಇದು ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದ 2023ನೇ ಸಾಲಿನ ವರದಿ ಹಾಗು ಸಂಪೂರ್ಣ ಮಾಹಿತಿ ಕಣಜ ಎಂದರೆ ತಪ್ಪಾಗಲಾರದು. ಸಂಸ್ಥೆಯಲ್ಲಿ ಜರುಗಿದ ಕಾರ್ಯಕ್ರಮಗಳಿಗೆ ಅಕ್ಷರ ರೂಪ ನೀಡಿ ಅವುಗಳ ಛಾಯಾಚಿತ್ರಗಳೊಂದಿಗೆ ಮುದ್ರಣ ರೂಪ ನೀಡಿ ಮುಂದಿನ ಪೀಳಿಗೆಗೆ ಇತಿಹಾಸವನ್ನು ತಿಳಿಸಲು ಈ ಪುಸ್ತಕವು ಸಹಕಾರಿಯಾಗಲಿದೆ ಎಂಬ ಆಶಯದೊಂದಿಗೆ ಈ ಪುಸ್ತಕ ಹೊರತರಲು ಸಹಕರಿಸಿದ ಸರ್ವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

# ಪ್ರಾಂಶುಪಾಲರ ನುಡಿ




**ಪಿ.ಸುರೇಶ.** ಎಂ.ಎ., ಎಂ.ಇಡಿ., ಎಂ.ಫಿಲ್.

ಗ್ರಾಮೀಣ ಮಕ್ಕಳಿಗೆ ಅದರಲ್ಲೂ ಬಡ ಕುಟುಂಬದ ಮಕ್ಕಳಿಗೆ ಶಿಕ್ಷಣವೆಂಬುದು ಗಗನ ಕುಸುಮವಾಗಿದ್ದ ಸಂದಿಗ್ಧ ಕಾಲದಲ್ಲಿ ಅವರಿಗೆ ಅಕ್ಷರವನ್ನು ಎರಕ ಹೊಯ್ಯಲು 1974ರಲ್ಲಿ ಶ್ರೀ ಎಸ್.ಎಂ.ಲಿಂಗಪ್ಪನವರು ಗ್ರಾಮಭಾರತಿ ವಿದ್ಯಾಸಂಸ್ಥೆಗೆ ಅಡಿಪಾಯ ಹಾಕಿದರು. ನಂತರ ಉನ್ನತ ಶಿಕ್ಷಣಕ್ಕೆ, ಶಿಕ್ಷಕರ ಶಿಕ್ಷಣಕ್ಕೆ ದೂರದ ಊರುಗಳಿಗೆ ಅಲೆದಾಡುತ್ತಿದ್ದ ವಿದ್ಯಾರ್ಥಿಗಳಿಗೆ ಅದರಲ್ಲೂ ಗ್ರಾಮೀಣ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಮರೀಚಿಕೆಯಾಗಿದ್ದ ಸಂದರ್ಭದಲ್ಲಿ ಇದನ್ನು ಮನಗಂಡ ಶ್ರೀಯುತ ಎಸ್.ಸಿ.ಚಿಕ್ಕಣ್ಣಗೌಡರು 2004–05ನೇ ಸಾಲಿನಲ್ಲಿ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯವನ್ನು (ಬಿ.ಇಡಿ.) ಸ್ಥಾಪಿಸಿದರು. ಹೀಗೆ ‘ಹಿರಿಮೆಗೊಂದು ಗರಿ’ ಎಂಬಂತೆ ಗ್ರಾಮಭಾರತಿ ವಿದ್ಯಾಸಂಸ್ಥೆಯ ಚೊಚ್ಚಲ ಕೂಸಾದ ಈ ನಮ್ಮ ಶಿಕ್ಷಣ ಮಹಾವಿದ್ಯಾಲಯವು 18 ವಸಂತಗಳನ್ನು ಪೂರೈಸಿ 19 ನೇ ವಸಂತಕ್ಕೆ ನವಪ್ರಯೋಗಗಳೊಂದಿಗೆ ದಾಪುಗಾಲಿಡುತ್ತಿದೆ.

ನಮ್ಮ ಸಂಸ್ಥೆಗೆ ಶಿಕ್ಷಕರ ತರಬೇತಿಗೆ ಆಗಮಿಸುವ ವಿದ್ಯಾರ್ಥಿಗಳಿಗೆ ತರಬೇತಿ ವಿಷಯಗಳನ್ನು ಪುಸ್ತಕದಿಂದ ಮಸ್ತಕಕ್ಕೆ ತುಂಬುವುದರ ಜೊತೆಗೆ ಅವರಲ್ಲಿ ಸೌಹಾರ್ದದ ನಡೆಯನ್ನು, ಸುಶ್ರಾವ್ಯ ವೃಂದ ಗಾನದಲ್ಲಿ ಮತ್ತೊಂದು ಸ್ವರ ಸೇರಿಸಿದರೆ ಎಷ್ಟು ಇಂಪಾಗಿ ಕರ್ಣಾನಂದವಾಗುವುದೋ ಹಾಗೆ ಅವರ ಸರ್ವತೋಮುಖ ವಿಕಾಸಕ್ಕೆ ಪೂರಕವಾಗುವಂತಹ ಅನೇಕ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಪ್ರಶಿಕ್ಷಣಾರ್ಥಿಗಳಲ್ಲಿ ಸುಪ್ತವಾಗಿರುವ ಕಲೆ, ಚಿತ್ರಕಲೆ ಮತ್ತು ಸಾಹಿತ್ಯದ ಪ್ರತಿಭೆಗಳ ಅನಾವರಣಕ್ಕೆ ನಾಂದಿ ಹಾಡುವುದರ ಮೂಲಕ ಅವರ ವ್ಯಕ್ತಿತ್ವದ ಬೆಳವಣಿಗೆಗೆ ಮಾನ್ಯ ಅಧ್ಯಕ್ಷರಾದಿಯಾಗಿ ಎಲ್ಲರೂ ಶ್ರಮಿಸುತ್ತಿರುವುದು ಸ್ತುತ್ಯಾರ್ಹವಾಗಿದೆ.

ಈ ಸುಸಂದರ್ಭದಲ್ಲಿ ಯಾವಾಗಲೂ ಹೊಸತನ ಇರಬೇಕೆಂದು ಇಚ್ಛಿಸುವ ನಮ್ಮ ಇಂದಿನ ಮಾನ್ಯ ಅಧ್ಯಕ್ಷರಾದ ಶ್ರೀಯುತ ಎಸ್.ಸಿ.ಕಿರಣ್ ಕುಮಾರ್ ಅವರ ಪ್ರೇರಣೆಯಂತೆ ಇಂದು ನಾವು ನಮ್ಮ ಸಂಸ್ಥೆಯಲ್ಲಿ 2023ರ ವಾರ್ಷಿಕ ಸಂಚಿಕೆ **"ಶೈಕ್ಷಣಿಕ ಸಂಭ್ರಮ –2023"** ವನ್ನು ಹೊರತರುತ್ತಿದ್ದೇವೆ. ಈ ಸಂಚಿಕೆಯ ಗಜ ಪ್ರಸವಕ್ಕೆ ಬಹು ಮುಖ್ಯ ಕಾರಣಕರ್ತರು ಮಾನ್ಯ ಅಧ್ಯಕ್ಷರು. ಪ್ರಾಂಶುಪಾಲರು, ಬೋಧಕ ವರ್ಗದವರು ನಿರ್ವಹಿಸಬೇಕಾದ ಸಂಪೂರ್ಣ ಜವಾಬ್ದಾರಿಯನ್ನು ಅಂದರೆ ವಿದ್ಯಾರ್ಥಿಗಳ ಲೇಖನಗಳನ್ನು ಮುದ್ರಿಸುವುದು, ಒಂದು ವರ್ಷದ ಅವಧಿಯ ವಿನೂತನ ಕಾರ್ಯಕ್ರಮಗಳ ಛಾಯಾಚಿತ್ರಗಳನ್ನು ಅಚ್ಚು ಹಾಕುವುದು ಇನ್ನಿತರೆ ಎಲ್ಲಾ ಕಾರ್ಯಗಳನ್ನು ಸ್ವತಃ ಅಧ್ಯಕ್ಷರೇ ನಿರ್ವಹಿಸಿದ್ದಾರೆ ಎಂದು ತಿಳಿಸಲು ಹರ್ಷಿಸುತ್ತೇನೆ. ಈ ವಾರ್ಷಿಕ ಸಂಚಿಕೆಯಲ್ಲಿ ವಿದ್ಯಾರ್ಥಿಗಳ ಸ್ವ ರಚಿತ ಕವನಗಳು, ಲೇಖನಗಳು, ಕಲೆ, ಚಿತ್ರಕಲೆ ಮತ್ತು ಸಾಹಿತ್ಯದ ವಿವಿಧ ಮಜಲುಗಳಿದ್ದು ಪ್ರಶಿಕ್ಷಣಾರ್ಥಿಗಳ ಬಹುಮುಖ ವ್ಯಕ್ತಿತ್ವದ ದರ್ಶನವಾಗಿದೆ. ಆದ್ದರಿಂದ ಈ ವರ್ಷದಲ್ಲಿ ಮೊದಲ ಮುಗುಳು ನಗೆಯೊಂದಿಗೆ ಅಂಬೆಗಾಲಿಟ್ಟಿರುವ ಈ ನಮ್ಮ ವಾರ್ಷಿಕ ಸಂಚಿಕೆ ಮುಂದಿನ ವರ್ಷಗಳಲ್ಲಿ ಅಶ್ವವೇಗದೊಂದಿಗೆ ಹೊಸ ವಿನೂತನ ಪ್ರಯೋಗಗಳಿಂದ ಸಾಗಲಿ ಎಂದು ಆಶಿಸುತ್ತೇನೆ. ಈ ವಾರ್ಷಿಕ ಸಂಚಿಕೆಯ ಪ್ರಕಟಣೆಗೆ ತುಂಬಾ ಶ್ರಮವಹಿಸಿ, ಸಹಕರಿಸಿ, ಪ್ರೋತ್ಸಾಹಿಸಿದ ಸಂಸ್ಥೆಯ ಮಾನ್ಯ ಅಧ್ಯಕ್ಷರು ಹಾಗೂ ಸಂಪಾದಕರಾದ ಶ್ರೀಯುತ ಎಸ್.ಸಿ.ಕಿರಣ್ ಕುಮಾರ್ ಅವರಿಗೂ, ಮಾತೃಶ್ರೀ ಕೆ.ಎಂ.ಪುಟ್ಟಲಕ್ಷ್ಮಮ್ಮನವರಿಗೂ, ಎಲ್ಲಾ ಬೋಧಕ, ಬೋಧಕೇತರ ವರ್ಗದವರಿಗೂ ಮತ್ತು ಎಲ್ಲಾ ಪ್ರಶಿಕ್ಷಣಾರ್ಥಿಗಳಿಗೂ ತುಂಬು ಹೃದಯದ ಧನ್ಯವಾದಗಳು ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

# ಸಂಪಾದಕರ ನುಡಿ




**ಗಂಗಾಧರ.ಕೆ.ಎನ್. ಎಂ.ಎ., ಎಂ.ಇಡಿ., ಕೆ.ಸೆಟ್.**

2023–24ನೇ ಶೈಕ್ಷಣಿಕ ವರ್ಷ ನಮ್ಮ ಗ್ರಾಮಭಾರತಿ ವಿದ್ಯಾಸಂಸ್ಥೆಗೆ ತುಂಬಾ ವಿಶೇಷವಾದದ್ದು. ಏಕೆಂದರೆ ಈ ವರ್ಷ ನಮ್ಮ ಗ್ರಾಮಭಾರತಿ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಎಸ್.ಎಂ.ಲಿಂಗಪ್ಪನವರ 105ನೇ ಜನ್ಮದಿನಾಚರಣೆಯ ವರ್ಷ.

ಪ್ರಪಂಚವನ್ನು ತನ್ನ ಕಬಂದ ಬಾಹುಗಳಿಂದ ಹಿಂಡಿ ಹಿಪ್ಪೆ ಮಾಡಿದ ಕರೋನ ಮಹಾಮಾರಿ ಹಾಗೂ ಇನ್ನಿತರೆ ಕಾರಣಗಳಿಂದ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಾಕಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳು ಸ್ಥಗಿತಗೊಂಡಿದ್ದವು. ಸದರಿ ಸಾಲಿನಲ್ಲಿ ಎಲ್ಲಾ ಕಾರ್ಯಕ್ರಮಗಳು ಪೂರ್ಣ ಪ್ರಮಾಣದಲ್ಲಿ ಜರುಗಿದವು. ಈ ಎಲ್ಲಾ ಕಾರ್ಯಕ್ರಮಗಳನ್ನು ಒಳಗೊಂಡ ವಾರ್ಷಿಕ ಸಂಚಿಕೆ 'ಶೈಕ್ಷಣಿಕ ಸಂಭ್ರಮ'ವನ್ನು ಹೊರತರಬೇಕೆಂದು ಸಂಸ್ಥೆಯ ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್ ಅವರ ಆಶಯದಂತೆ ಸಂಚಿಕೆಯ ಸಂಪಾದಕನಾಗಿ ನಾನು ನಿಯೋಜನೆಗೊಂಡೆ.

ಕಾಲೇಜಿನಲ್ಲಿ ಆಯೋಜಿಸಿದ ಕಾರ್ಯಕ್ರಮಗಳ ವರದಿಯನ್ನು ತಯಾರಿಸುವ ಸಂದರ್ಭದಲ್ಲಿ ಸಂಪಾದಕ ಮಂಡಳಿಯ ಸದಸ್ಯರಲ್ಲಿ ಒಬ್ಬರಾಗಿದ್ದ ದ್ವಿತೀಯ ಬಿ.ಇಡಿ. ಪ್ರಶಿಕ್ಷಣಾರ್ಥಿಯಾದ ನಿಶ್ಚಿತ.ಎಂ.ಎನ್ ಹಾಗೂ ನನ್ನ ಸಹೋದ್ಯೋಗಿ ಮಿತ್ರರಾದ ಸತೀಶ್.ಎಂ.ವಿ.ರವರುಗಳು ಪೂರ್ಣ ಸಹಕಾರ ನೀಡಿದರು.

ಕೃತಿ ಸಂಪಾದಕನ ಜವಾಬ್ದಾರಿ ಅರಿಯದಿದ್ದ ನಾನು ಏನು ಮಾಡಬೇಕೆಂದು ತಿಳಿಯದೇ ಸುಮ್ಮನಾಗಿಬಿಟ್ಟೆ. ಎರಡು ಮೂರು ಬಾರಿ ಪ್ರಾಚಾರ್ಯರು ಎಚ್ಚರಿಸಿದಾಗಲೂ ಸಹ ನಾನು ನನ್ನ ವೈಯಕ್ತಿಕ ಬದುಕಿನ ತೀವ್ರ ಒತ್ತಡದಿಂದಾಗಿ ಅಸಹಾಯಕನಾದೆ. ಇದರಿಂದಾಗಿ ಸಂಚಿಕೆಯ ಕಾರ್ಯಚಟುವಟಿಕೆಗಳು ಎರಡು ತಿಂಗಳು ಸ್ಥಗಿತಗೊಂಡವು.

ನನ್ನ ಪರಿಸ್ಥಿತಿಯನ್ನು ಅರಿತ ಪ್ರಧಾನ ಸಂಪಾದಕರು ಹಾಗು ನಮ್ಮ ಸಂಸ್ಥೆಯ ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್ ಅವರು ಸಂಪಾದಕತ್ವದ ಎಲ್ಲಾ ಜವಾಬ್ದಾರಿಗಳನ್ನು ಕೇವಲ ನಾಲ್ಕು ದಿನಗಳಲ್ಲಿ ಯಶಸ್ವಿಯಾಗಿ ಪೂರೈಸಿ ಸಂಚಿಕೆಗೆ ಒಂದು ಚೌಕಟ್ಟನ್ನು ಹೊಸ ರೂಪವನ್ನು ನೀಡಿದ್ದಾರೆ. ಸಂಚಿಕೆಯ ಡಿ.ಟಿ.ಪಿ ಕಾರ್ಯ, ಮುಖಪುಟ ವಿನ್ಯಾಸ, ಭಾವಚಿತ್ರಗಳ ಜೋಡಣೆ, ಮುದ್ರಣ ಕಾರ್ಯದ ಸಂಪೂರ್ಣ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ಅಧ್ಯಕ್ಷರ ಈ ರೀತಿಯ ಕಾರ್ಯ ವೈಕರಿಯನ್ನು ಕಂಡ ನಾನು, ಮುಂದಿನ ದಿನಗಳಲ್ಲಿ ಸಂಪಾದಕತ್ವದ ಎಲ್ಲಾ ಜವಾಬ್ದಾರಿಗಳನ್ನು ನಾನೇ ಖುದ್ದು ನಿರ್ವಹಿಸಬೇಕೆಂದು ಮನಸ್ಸು ಮಾಡಿ ಅಧ್ಯಕ್ಷರಿಗೆ ಮಾತು ನೀಡಿದ್ದೇನೆ.

ಈ ಸಂಚಿಕೆಯ ವಿನ್ಯಾಸ, ಡಿ.ಟಿ.ಪಿ ಕಾರ್ಯ ಇವುಗಳನ್ನು ಅಧ್ಯಕ್ಷರು ನಿರ್ವಹಿಸಿದ ರೀತಿ ಮತ್ತು ಅವರೊಂದಿಗೆ ನಾನು ಈ ನಾಲ್ಕು ದಿನದ ಒಡನಾಟದಿಂದ ಕಲಿತದ್ದೆಂದರೆ ಸಮಯದ ಮಹತ್ವ ಮತ್ತು ವಿದ್ಯೆ ಯಾರ ಸ್ವತ್ತು ಅಲ್ಲಾ... ಅದು ಸಾಧಕನ ಸ್ವತ್ತು. ಈ ಸಂಚಿಕೆಯು ಇಷ್ಟು ಅಚ್ಚುಕಟ್ಟಾಗಿ ಮುದ್ರಣ ಕಾಣಲು ಕಾರಣರಾದ ಎಸ್.ಸಿ.ಕಿರಣ್ ಕುಮಾರ್ ಅವರಿಗೆ ನನ್ನ ಹೃದಯ ಸ್ಪರ್ಶಿ ನಮನಗಳು.

# ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ

## ಮಾನವ ಹಕ್ಕುಗಳ ಸಮಿತಿ



ಹರ್ಷಿತ.ಜಿ.



ತುಂಗ.ಪಿ.ಆರ್.



ಚೇತನ.ಜಿ.ಬಿ.



ದಿನೇಶ.ಎಸ್.ಎಂ.



ಐಶ್ವರ್ಯ.ಸಿ.ಕೆ.

## ಮಹಿಳಾ ದೌರ್ಜನ್ಯ ತಡೆಗಟ್ಟುವ ಸಮಿತಿ



ಲೀಲಾವತಿ



ರೂಪ.ಎಸ್.ಬಿ



ಧನುಷ.ಎನ್.



ರಶ್ಮಿ.ಎಂ.ಕೆ.



ಅಶ್ವೀಜ.ಎ.ಬಿ.



ತೇಜಸ್ವಿನಿ.ಕೆ.ಎಲ್.



ರಂಜಿತ.ಜಿ.ಆರ್.

# ರ್‍ಯಾಗಿಂಗ್ ವಿರೋಧಿ ಸಮಿತಿ



ಚಾಂದಿನಿ.ಎಸ್.



ಬಿಲ್ವಪ್ರಿಯ.ಬಿ.ಆರ್.



ಶ್ವೇತ.ಆರ್.ಎಂ.



ರಾಣಿ.ಎಸ್.ಎಸ್.



ಸಚಿನ್.ಎಂ.

## 2022–23ನೇ ಸಾಲಿನ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು

1. ಎಸ್.ಸಿ.ಕಿರಣ್ ಕುಮಾರ್ – ಗೌರವ ಅಧ್ಯಕ್ಷರು
2. ಸುರೇಶ.ಪಿ – ಅಧ್ಯಕ್ಷರು
3. ಸಚಿನ್.ಕೆ. – ಉಪಾಧ್ಯಕ್ಷರು
4. ಸಂತೋಷ್.ಎನ್.ಪಿ – ಉಪಾಧ್ಯಕ್ಷರು
5. ಪುಟ್ಟಲಕ್ಷ್ಮಮ್ಮ.ಕೆ.ಎಂ. – ಗೌರವ ಕಾರ್ಯದರ್ಶಿಗಳು
6. ರಕ್ಷಿತ.ಆರ್. – ಕಾರ್ಯದರ್ಶಿಗಳು
7. ಜೀವಿತ.ಆರ್.ಕೆ. – ಕಾರ್ಯದರ್ಶಿಗಳು
8. ನಿಶ್ಚಿತ.ಎಂ.ಎನ್. – ಖಜಾಂಚಿ
9. ಚಂದ್ರಶೇಖರ್.ಬಿ.ಕೆ. – ಖಜಾಂಚಿ
10. ಯೋಗೇಶ್.ಎಂ.ಪಿ. – ಸದಸ್ಯರು
11. ಪುನೀತ್.ಕೆ.ಆರ್. – ಸದಸ್ಯರು
12. ಸಿಂಧು.ಹೆಚ್.ಎಸ್. – ಸದಸ್ಯರು
13. ದಿನೇಶ್ – ಸದಸ್ಯರು
14. ವಿದ್ಯಾ.ಹೆಚ್.ವಿ. – ಸದಸ್ಯರು



ಸಚಿನ್.ಕೆ.



ರಕ್ಷಿತ.ಆರ್.



ನಿಶ್ಚಿತ.ಎಂ.ಎನ್.



ಯೋಗೇಶ್.ಎಂ.ಪಿ.



ಪುನೀತ್‌ಕುಮಾರ್.ಕೆ.ಆರ್.



ಸಿಂಧು.ಹೆಚ್.ಎಸ್.



ಸಂತೋಷ್.ಎಂ.ಪಿ.



ಜೀವಿತ.ಆರ್.ಕೆ.



ಚಂದ್ರಶೇಖರ್.ಬಿ.ಕೆ.



ದಿನೇಶ್.ಎಸ್.ಎಂ.



ವಿದ್ಯಾಎಚ್.ವಿ.


2022–23ನೇ ಸಾಲಿನಲ್ಲಿ ತೇರ್ಗಡೆ ಹೊಂದಿದ ದ್ವಿತೀಯ ಬಿ.ಇಡಿ. ಪ್ರಶಿಕ್ಷಣಾರ್ಥಿಗಳ ಗುಂಪು ಛಾಯಾಚಿತ್ರ
ಎಸ್.ಎಂ ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ ಕೃಷ್ಣರಾಜಪೇಟೆ
2022–2023

# 2022–23ನೇ ಸಾಲಿನ ದ್ವಿತೀಯ ಬಿ.ಇಡಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಶಿಕ್ಷಣಾರ್ಥಿಗಳ ವಿವರ



Akash A T



Anildev R



Arathi D S



Arpitha M N



Ashwija A B



Bilwapriya G R



Chandini A



Chandrakala H N



Chethana G B



Deepthi N



Dhanusha N



Dinesh Achar A R



Harshitha G



Harshitha M K



Jeevitha N



Keerthi A D



Lokashree C



Manoj Kumar R M



Nandan S K



Nayana



Nikhil A C



Nishchitha M N



Pavan Kumar M P



Poornima B R



Priya C B



Punith Kumar K R



Rakshith M Y



Rakshitha R



Rashmi M K



Sachin K



Sahana D



Sahana A N



Sahana A R


Sathish J B


Sharada S


Shilpa K S


Shwetha R M


Sindhu H S


Thulasi J


Tunga P R


Varsha A V


Yogesh M P

# ಶೈಕ್ಷಣಿಕ ವರ್ಷದ ಪ್ರಾರಂಭ ದಿನ



ದಿನಾಂಕ 02–01–2023ರ ಸೋಮವಾರ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ 2022–23ನೇ ಸಾಲಿನ ಶೈಕಣಿಕ ವರ್ಷದ ಪ್ರಾರಂಭಕ್ಕೆ ಸಂಸ್ಥೆಯ ಅಧ್ಯಕ್ಷರು ತರಗತಿಯಲ್ಲಿ ಕೇಕ್ ಕತ್ತರಿಸುವ ಮೂಲಕ ಎಲ್ಲರಿಗೂ ಶುಭವನ್ನು ಕೋರಿದರು.

ಪ್ರಾಂಶುಪಾಲರಾದ ಪಿ. ಸುರೇಶ್‌ರವರು, ಉಪನ್ಯಾಸಕರುಗಳಾದ ಕೆ.ಎಸ್.ಶಿವಕುಮಾರ್, ಮಹಾಲಿಂಗ.ಕೆ., ಸತೀಶ್‌ಎಂ.ವಿ., ಗಂಗಾಧರ್.ಕೆ.ಎನ್. ಹಾಗೂ ಸ್ವಾತಿರವರುಗಳು ಮತ್ತು ಎಲ್ಲಾ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

# ತೃತೀಯ ಸೆಮಿಸ್ಟರ್‌ನ ಓರಿಯಂಟೇಷನ್ ಕಾರ್ಯಕ್ರಮ



ದಿನಾಂಕ 02–01–2023ರ ಸೋಮವಾರ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಓರಿಯಂಟೇಷನ್ ಕಾರ್ಯಕ್ರಮದ ಅಂಗವಾಗಿ ಬಿ.ಇಡಿ ತೃತೀಯ ಸೆಮಿಸ್ಟರ್‌ನ ಪ್ರಶಿಕ್ಷಣಾರ್ಥಿಗಳಿಗೆ ಸಹಪ್ರಾಧ್ಯಾಪಕರಾದ ಕೆ.ಎಸ್.ಶಿವಕುಮಾರ್‌ರವರು 2022–23ನೇ ಶೈಕ್ಷಣಿಕ ವರ್ಷದಲ್ಲಿ ಇರುವ ವಿಷಯಗಳ ಬಗ್ಗೆ, ಆಂತರಿಕ ಮತ್ತು ಬಾಹ್ಯ ಅಂಕಗಳು, ಪರೀಕ್ಷಾ ಕಾರ್ಯ ಚಟುವಟಿಕೆಗಳು , ಪ್ರಾಯೋಜಿಕ ಚಟುವಟಿಕೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಪ್ರಶಿಕ್ಷಣಾರ್ಥಿಗಳು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪಿ. ಸುರೇಶ್‌ರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಕೆ.ಎಸ್.ಶಿವಕುಮಾರ್, ಕೆ.ಮಹಾಲಿಂಗ, ಸತೀಶ್.ಎಂ.ವಿ., ಗಂಗಾಧರ್.ಕೆ.ಎನ್ ಹಾಗೂ ಸ್ವಾತಿರವರುಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಕೇಂದ್ರ ಬಿಂದುಗಳಾಗಿ ಅಂತಿಮ ಬಿ.ಇಡಿ ತೃತೀಯ ಸೆಮಿಸ್ಟರ್‌ನ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು. ಓರಿಯಂಟೇಷನ್ ಕಾರ್ಯಕ್ರಮವನ್ನು ನಡೆಸಿಕೊಟ್ಟ ಕೆ.ಎಸ್.ಶಿವಕುಮಾರ್‌ರವರಿಗೆ ಹಾಗೂ ಅತಿಥಿ ವೃಂದಕ್ಕೆ ಉಪನ್ಯಾಸಕರಾದ ಸ್ವಾತಿರವರು ಗೌರವ ಪೂರ್ವಕ ವಂದನೆ ಸಲ್ಲಿಸಿದರು.

# ಸ್ವಾಮಿ ವಿವೇಕಾನಂದರ ಜಯಂತಿ



ದಿನಾಂಕ 12–01–2023ರ ಗುರುವಾರದಂದು ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪಿ.ಸುರೇಶ್‌ರವರು ವಹಿಸಿದ್ದರು. ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಯುವಶಕ್ತಿ ಮಹತ್ವವನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಗಂಗಾಧರ್.ಕೆ.ಎನ್. ಪ್ರಾಸ್ತಾವಿಕ ನುಡಿಯಾಡಿದರು. ಮುಖ್ಯ ಅತಿಥಿಗಳಾಗಿ ಉಪನ್ಯಾಸಕರಾದ ಕೆ.ಎಸ್.ಶಿವಕುಮಾರ್, ಮಹಾಲಿಂಗ.ಕೆ, ಸತೀಶ್.ಎಂ.ವಿ, ಹಾಗೂ ಸ್ವಾತಿರವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಪ್ರಶಿಕ್ಷಣಾರ್ಥಿ ಸಿಂಧೂ ಹೆಚ್.ಎಸ್., ಸ್ವಾಗತವನ್ನು ಯೋಗೇಶ್ ಹಾಗು ವಂದನಾರ್ಪಣೆಯನ್ನು ಹರ್ಷಿತ್.ಎಂ.ಕೆ ರವರುಗಳು ನಡೆಸಿಕೊಟ್ಟರು.

# ನವಮನದ ಮಾತು ಫಲಕದ ಅನಾವರಣ




ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್‌ರವರು ಪ್ರಶಿಕ್ಷಣಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸಲು ಸಹಕಾರಿಯಾಗುವ ಉದ್ದೇಶದಿಂದ 'ಫಲಕ' ಕಾಲೇಜಿನಲ್ಲಿ ಅಳವಡಿಸಿದರು.

ಈ ಫಲಕವನ್ನು ದಿನಾಂಕ 23/01/2023ರ ಸೋಮವಾರದಂದು ಸಂಸ್ಥೆಯ ಅಧ್ಯಕ್ಷರಾದ ಎಸ್.ಸಿ.ಕಿರಣ್‌ಕುಮಾರ್‌ರವರು ಉದ್ಘಾಟಿಸಿದರು. ಸೂಚನಾ ಫಲಕಕ್ಕೆ ಹೆಸರೊಂದನ್ನು ನೀಡುವ ಉದ್ದೇಶದಿಂದ ಎಲ್ಲಾ ಪ್ರಶಿಕ್ಷಣಾರ್ಥಿಗಳಿಗೂ ಒಂದೊಂದು ಹೆಸರನ್ನು ಸೂಚಿಸಲು ತಿಳಿಸಲಾಗಿತ್ತು. ದ್ವಿತೀಯ ಬಿ.ಇಡಿ ಪ್ರಶಿಕ್ಷಣಾರ್ಥಿ ಅರ್ಪಿತಾ.ಎಂ.ಎನ್.ರವರು ಸೂಚಿಸಿದ 'ನವಮನದ ಮಾತು' ಎಂಬ ಹೆಸರನ್ನು ಸೂಚನ ಫಲಕಕ್ಕೆ ಇಡಲಾಯಿತು. ನಮ್ಮ ಸಂಸ್ಥೆಯ ಕಾರ್ಯದರ್ಶಿ ಪುಟ್ಟಲಕ್ಷ್ಮಮ್ಮರವರು, ಪ್ರಾಂಶುಪಾಲರಾದ ಸುರೇಶರವರು, ಎಲ್ಲಾ ಉಪನ್ಯಾಸಕರುಗಳು ಹಾಗೂ ಎಲ್ಲಾ ಪ್ರಶಿಕ್ಷಣಾರ್ಥಿಗಳು ಹಾಜರಿದ್ದರು.

# ಮತದಾನ ಮತ್ತು ಸಂವಿಧಾನ ಪ್ರತಿಜ್ಞಾವಿಧಿ ಸ್ವೀಕಾರ



ದಿನಾಂಕ 25/01/2023ರ ಬುಧವಾರದಂದು ಸಂವಿಧಾನ ಪ್ರಸ್ತಾವನೆಯನ್ನು ಓದಿ, ಅದನ್ನು ನಾವು ಅಳವಡಿಸಿಕೊಳ್ಳುತ್ತೇವೆ ಎಂದು ಎಲ್ಲಾ ಪ್ರಶಿಕ್ಷಣಾರ್ಥಿಗಳು, ಪ್ರಾಂಶುಪಾಲರು ಹಾಗೂ ಸಹಪ್ರಾಧ್ಯಾಪಕರುಗಳು ಪ್ರಮಾಣ ವಚನವನ್ನು ಸ್ವೀಕರಿಸಿದರು.

# 74ನೇ ಗಣರಾಜ್ಯೋತ್ಸವ ಕಾರ್ಯಕ್ರಮ



ಗ್ರಾಮಭಾರತಿ ವಿದ್ಯಾಸಂಸ್ಥೆ ಮತ್ತು ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ ದಿನಾಂಕ 26–01–2023 ಗುರವಾರದಂದು 74ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಅಂದು ಸಂಸ್ಥೆಯಲ್ಲಿ ಎಲ್ಲರಿಗೂ ಉಪಾಹಾರ ವ್ಯವಸ್ಥೆಯನ್ನು ಮಾಡಲಾಗಿತ್ತು. ಬೆಳಿಗ್ಗೆ 8 ಗಂಟೆಗೆ ಸರ್ವರೂ ಉಪಾಹಾರವನ್ನು ಸ್ವೀಕರಿಸಿದೆವು.

ನಂತರ ಬೆಳಿಗ್ಗೆ 8.45 ಗಂಟೆಗೆ ಸಂಸ್ಥೆಯ ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್‌ರವರು ಧ್ವಜಾರೋಹಣ ಮಾಡಿದರು. ನಂತರ ಗಣರಾಜ್ಯೋತ್ಸವ ಕಾರ್ಯಕ್ರಮದ ಪ್ರಯುಕ್ತ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಚೈತ್ರ ಮತ್ತು ಸಿಂಚನರವರು ಪ್ರಾರ್ಥನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಶುಭಕೋರಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸರ್ವರನ್ನು ದ್ವಿತೀಯ ಬಿ.ಇಡಿ ಪ್ರಶಿಕ್ಷಣಾರ್ಥಿಯಾದ ಬಿಲ್ವಪ್ರಿಯಾರವರು ಸ್ವಾಗತಿಸಿದರು. ಶ್ರೀಯುತ ಯತೀಶ್.ಸಿ.ಎನ್. ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ಕೃಷ್ಣರಾಜಪೇಟೆ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಗಣರಾಜೋತ್ಸವದ ಮಹತ್ವವನ್ನು ತಮ್ಮ ಪ್ರಧಾನ ಭಾಷಣದಲ್ಲಿ ವಿವರಿಸಿದರು.

ಸಂಸ್ಥೆಯ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳು ವಿವಿಧತೆಯಲ್ಲಿ ಏಕತೆಯನ್ನು ಬಿಂಬಿಸುವ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರುವ ನೃತ್ಯಗಳು ಹಾಗೂ ನಾಟಕಗಳನ್ನು ಬಹಳ ಉತ್ಸುಕತೆಯಿಂದ ಯಶಸ್ವಿಯಾಗಿ ನಡೆಸಿಕೊಟ್ಟರು.

ಸಂಸ್ಥೆಯ ಅಧ್ಯಕ್ಷರು ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪ್ರಪಂಚದಲ್ಲಿಯೇ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶ ಭಾರತ. ಭಾರತ ದೇಶದಲ್ಲಿ ಹತ್ತಾರು ಧರ್ಮ, ಸಾವಿರಾರು ಜಾತಿ, ಭಾಷೆಯ ಜನರು ಶಾಂತಿ, ಸೌಹಾರ್ದದತೆ ಮತ್ತು ಸಹಬಾಳ್ವೆಯಿಂದ ಬದುಕಲು ದಾರಿ ದೀಪವಾಗಿರುವುದು ಭಾರತೀಯ ಸಂವಿಧಾನ. ಈ ಸಂವಿಧಾನವು ನಮಗೆಲ್ಲರಿಗೂ ಬೆಳಕಾಗಿದೆ. ಆ ಬೆಳಕಿನಲ್ಲಿ ನಾವೆಲ್ಲರೂ ಸಾಗೋಣ, ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯೋಣ ಎಂದರು. ಅಲ್ಲದೆ ವಿವಿಧತೆಯಲ್ಲಿ ಏಕತೆಯನ್ನು ಸಾರುವ ಮತ್ತು ದೇಶದ ವಿವಿಧ ನೃತ್ಯ ಪ್ರಾಕಾರವನ್ನು ಪ್ರದರ್ಶಿಸಿದ ಎರಡು ತಂಡಗಳಿಗೆ ತಲಾ ರೂ. 5,000/– (ಐದು ಸಾವಿರ) ಮತ್ತು ಭಾಗವಹಿಸಿದ ಇತರೆ ಎಲ್ಲಾ ತಂಡಗಳಿಗೂ ರೂ. 2,000/– (ಎರಡು ಸಾವಿರ)ಗಳನ್ನು ಪ್ರೋತ್ಸಾಹಧನ ನೀಡಿದರು.

ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿನಿ ಯಾದ ಕು.ಮನಸ್ವಿ.ಕೆ.ಎನ್. ಸರ್ವರಿಗೂ ವಂದಿಸಿದರು.



# ಸರ್ವಧರ್ಮ ಸಮನ್ವಯ ಪ್ರತಿಜ್ಞಾವಿಧಿ ಸ್ವೀಕಾರ




ದಿನಾಂಕ 30/01/2023ರ ಸೋಮವಾರದಂದು ಸರ್ವೋದಯ ದಿನದ ಅಂಗವಾಗಿ ಸರ್ವಧರ್ಮ ಸಮನ್ವಯ ಪ್ರತಿಜ್ಞಾವಿಧಿಯನ್ನು ಎಲ್ಲಾ ಪ್ರಶಿಕ್ಷಣಾರ್ಥಿಗಳು, ಪ್ರಾಂಶುಪಾಲರು ಹಾಗೂ ಸಹಪ್ರಾಧ್ಯಾಪಕರುಗಳು ಸ್ವೀಕರಿಸಿದರು.

# 'ದ.ರಾ. ಬೇಂದ್ರೆ' ರವರ ಜಯಂತಿ




ದಿನಾಂಕ 31/01/2023ರ ಮಂಗಳವಾರದಂದು ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಪಿ.ಸುರೇಶರವರ ಅಧ್ಯಕ್ಷತೆಯಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ಬೇಂದ್ರೆಯವರ 127ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಕನ್ನಡ ಉಪನ್ಯಾಸಕರಾದ ಕೆ.ಎನ್.ಗಂಗಾಧರ್‌ರವರು ಬೇಂದ್ರೆಯವರ ಸಾಹಿತ್ಯದ ಬಗ್ಗೆ ವಿವರಣೆ ನೀಡಿದರು.

ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲರಾದ ಸುರೇಶರವರು ಭಾಷೆಯ ಬೆಳವಣಿಗೆಯಲ್ಲಿ ಕವಿಗಳ ಪಾತ್ರ ಮತ್ತು ಮಹತ್ವವನ್ನು ತಿಳಿಸಿದರು.

ದ್ವಿತೀಯ ಬಿ.ಇಡಿ ಪ್ರಶಿಕ್ಷಣಾರ್ಥಿ ನಿಶ್ಚಿತರವರು ನಿರೂಪಿಸಿ, ಸತೀಶ್ ಸ್ವಾಗತಿಸಿ, ಸಿಂಧೂರವರು ಸರ್ವರನ್ನು ವಂಧಿಸಿದರು.

# ಪ್ರತಿಭಾ ಪ್ರದರ್ಶನ ಕಾರ್ಯಕ್ರಮ

06–02–2023ರ ಸೋಮವಾರ ದಂದು ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಥಮ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗೆ ಪ್ರತಿಭಾ ಪ್ರದರ್ಶನ, ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮ ದಲ್ಲಿ ಅಭಿನಯ ಗೀತೆ, ಚಿತ್ರಗೀತೆ, ಏಕಪಾತ್ರಾಭಿನಯ, ಭಾವಗೀತೆ, ನೃತ್ಯ, ಜಾನಪದ ಗೀತೆಗಳನ್ನು ಹಾಡಿದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ಪ್ರಶಿಕ್ಷಣಾರ್ಥಿಗಳು ತಮ್ಮ ಪ್ರತಿಭೆ ಯನ್ನು ಪ್ರದರ್ಶಿಸಿ ಕಾರ್ಯಕ್ರಮ ವನ್ನು ಕಳೆಕಟ್ಟುವಂತೆ ಮಾಡಿದರು. ಉಪನ್ಯಾಸಕರಾದ ಮಹಾಲಿಂಗ.ಕೆ. ರವರು ಕಾರ್ಯಕ್ರಮದ ರೂಪು ರೇಷೆಗಳನ್ನು ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು.

ಪ್ರಾಚಾರ್ಯರಾದ ಸುರೇಶ.ಪಿ ರವರು ತಮ್ಮ ಅಧ್ಯಕ್ಷೀಯ ನುಡಿ ಯಲ್ಲಿ ಪ್ರತಿಭೆಗೆ ಬೇಕಿರುವುದು ಆತ್ಮಸ್ಥೈರ್ಯ ಮತ್ತು ಸೂಕ್ತ ವೇದಿಕೆ ಎಂದರು. ಎಲ್ಲಾ ಉಪನ್ಯಾಸಕರು ಉಪಸ್ಥಿತರಿದ್ದರು.









# 2022-23 ಸಾಲಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ







2022–23ನೇ ಶೈಕ್ಷಣಿಕ ವರ್ಷದ ಪ್ರಥಮ ಮತ್ತು ದ್ವಿತೀಯ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಂದ ಪ್ರತಿ ಶುಕ್ರವಾರದಂದು ಹಮ್ಮಿಕೊಳ್ಳುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ದಿನಾಂಕ 10–02–2023ರ ಶುಕ್ರವಾರದಂದು ಪ್ರಾಚಾರ್ಯರಾದ ಶ್ರೀಯುತ ಪಿ.ಸುರೇಶ ರವರು ಶಾರದಾ ದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಪ್ರಶಿಕ್ಷಣಾರ್ಥಿಗಳಿಗೆ ಸಭಾ ಕಂಪನ ಹೋಗಲಾಡಿಸುವ ಮೂಲಕ ಕಾರ್ಯಕ್ರಮವನ್ನು ಹೇಗೆ ಆಯೋಜಿಸಬೇಕೆಂದು ತಿಳಿಸಿ ಕೊಡಲಾಯಿತು. ಎಲ್ಲಾ ಉಪನ್ಯಾಸಕರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳ ವಿವಿಧ ಸಮಿತಿಗಳ ರಚನೆ



2022–23ನೇ ಸಾಲಿನ ಮಾನವ ಹಕ್ಕುಗಳ ಸಂಘ, ಮಹಿಳಾ ದೌರ್ಜನ್ಯ ತಡೆಗಟ್ಟುವ ಸಮಿತಿ ಮತ್ತು ರ್‍ಯಾಗಿಂಗ್ ವಿರೋಧಿ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ದಿನಾಂಕ 27–02–2023ರಂದು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು.

ಸಹಪ್ರಾಧ್ಯಾಪಕರಾದ ಎಂ.ವಿ. ಸತೀಶ್‌ರವರು ಪ್ರಾಸ್ತಾವಿಕ ನುಡಿಯಲ್ಲಿ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ತಿಳಿಸಿಕೊಟ್ಟರು. ಎಲ್ಲಾ ಪ್ರಶಿಕ್ಷಣಾರ್ಥಿಗಳು ಹಾಗೂ ಸಹ ಪ್ರಾಧ್ಯಾಪಕರುಗಳು ಉಪಸ್ಥಿತರಿದ್ದರು.

# ರಾಷ್ಟ್ರೀಯ ವಿಜ್ಞಾನ ದಿನ




ಫೆಬ್ರವರಿ 28, 2023ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನು ಶ್ರೀಯುತ ಎಸ್.ಶಿವಕುಮಾರ್, ಸಹ ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ವಿಜ್ಞಾನ ಶಿಕ್ಷಕಿಯಾದ ಶ್ರೀಮತಿ ವೇದಾವತಿ ಹಾಗೂ ಶ್ರೀಯುತ ಹೆಚ್.ಎಸ್.ಕೃಷ್ಣರವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

# ಮಹಿಳಾ ದಿನಾಚರಣೆ ಮತ್ತು ಸ್ವಾಗತ ಕಾರ್ಯಕ್ರಮ



08/03/2023ರ ಬುಧವಾರದಂದು ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಅಂತಿಮ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಂದ 'ಸ್ವಾಗತ ಕಾರ್ಯಕ್ರಮ ಮತ್ತು ಮಹಿಳಾ ದಿನಚಾರಣೆ' ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳನ್ನು ಅಂತಿಮ ವರ್ಷದ ಬಿ.ಇಡಿ. ಪ್ರಶಿಕ್ಷಣಾರ್ಥಿಗಳು ಆತ್ಮೀಯವಾಗಿ ಸ್ವಾಗತಿಸಿದರು. ಪ್ರಾಸ್ತಾವಿಕ ನುಡಿಯನ್ನು ಕಾಲೇಜಿನ ಪ್ರಾಂಶುಪಾಲರಾದ ಪಿ. ಸುರೇಶ್‌ರವರು ನುಡಿದರು.

ಅಂತಿಮ ಬಿ.ಇಡಿ. ಪ್ರಶಿಕ್ಷಣಾರ್ಥಿಗಳು ಹಲವಾರು ಗೀತೆಗಳನ್ನು ಹಾಡಿ, ನೃತ್ಯಗಳನ್ನು ಅಭಿನಯಿಸಿ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳನ್ನು ರಂಜಿಸಿದರು. ಕೆಲವು ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಮಹಿಳಾ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಪ್ರಾಂಶುಪಾಲರಾದ ಪವಿತ್ರ ಪದ್ಮನಾಭ್‌ರವರು ಆಗಮಿಸಿದ್ದರು. ಮಹಿಳಾ ದಿನಾಚರಣೆಯ ಮಹತ್ವವನ್ನು ಕುರಿತು ಪ್ರಶಿಕ್ಷಣಾರ್ಥಿಗಳಿಗೆ ಪವಿತ್ರರವರು ತಿಳಿಸಿದರು. ಕೊನೆಯಲ್ಲಿ ಇಬ್ಬರು ಮಹಿಳಾ ಅತಿಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಎಸ್.ಸಿ.ಕಿರಣ್‌ಕುಮಾರ್‌ರವರು ವಹಿಸಿಕೊಂಡು, ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಬಿ.ಇಡಿ. ಪ್ರಶಿಕ್ಷಣಾರ್ಥಿಗಳ ಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗೂ ಮಹಿಳಾ ದಿನಾಚರಣೆಯ ಮಹತ್ವವನ್ನು ತಿಳಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಪ್ರಶಿಕ್ಷಣಾರ್ಥಿಯಾದ ನಿಶ್ಚಿತ.ಎಂ.ಎನ್, ಪ್ರಾರ್ಥನೆಯನ್ನು ಬಿಲ್ವಪ್ರಿಯಾ ಮತ್ತು ಅನಿಲ್‌ದೇವ್‌ರವರು, ಸ್ವಾಗತವನ್ನು ಸಿಂಧೂರವರು, ವಂದನಾರ್ಪಣೆಯನ್ನು ನಯನರವರು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ದ್ವಿತೀಯ ಬಿ.ಇಡಿ. ಪ್ರಶಿಕ್ಷಣಾರ್ಥಿಗಳು ಪ್ರಥಮ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗೆ ನೆನಪಿನ ಕಾಣಿಕೆಯನ್ನು ಮತ್ತು ಸ್ಪರ್ಧೆಯಲ್ಲಿ ಗೆದ್ದ ವಿಜೇತರಿಗೆ ಬಹುಮಾನವನ್ನು ನೀಡಿದರು.

# ನಾಟಕಾಭಿನಯ







15–03–2023ರ ಸೋಮವಾರದಂದು ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ನಾಟಕಾಭಿನಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅಂತಿಮ ವರ್ಷದ ಬಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಕೃಷ್ಣಮೂರ್ತಿ ರವರು ಕಲೆ ಮತ್ತು ನಾಟಕಾಭಿನಯದ ಬಗ್ಗೆ ಪ್ರಾಯೋಗಿಕವಾಗಿ ತಿಳಿಸಿಕೊಟ್ಟಿದ್ದರು. ಅದರ ಅನುಸಾರ ನಮ್ಮ ಪ್ರಸ್ತುತ ಸಾಮಾಜಿಕ, ವೈಜ್ಞಾನಿಕ, ಶೈಕ್ಷಣಿಕ ಹಾಗೂ ಪೌರಾಣಿಕ ಅಂಶಗಳನ್ನು ಕುರಿತಾದ ನಾಟಕಗಳನ್ನು ಅಭಿನಯಿಸಿದರು. ಇದರಿಂದ ನಟನಾ ಪ್ರವೃತ್ತಿ ಉತ್ತಮಗೊಂಡಿತು. ಜೊತೆಗೆ ಪಾಠ ಬೋಧನೆಯಲ್ಲಿ ನಾಟಕಾಭಿನಯವನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬುದು ಅವರಿಗೆ ತಿಳಿದಂತಾಯಿತು.

# TEACHER PLACEMENT AND CET WORKSHOP

ದಿನಾಂಕ 16–03–2023ರ ಗುರುವಾರದಂದು ನಮ್ಮ ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ CET ವೃತ್ತಿ ಕೌಶಲ, ವ್ಯಕ್ತಿತ್ವ ವಿಕಸನ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿ ಕುರಿತು ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪಿ. ಸುರೇಶ್‌ರವರು ವಹಿಸಿದ್ದರು. ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈಗಿನಿಂದಲೇ ತಯಾರಿ ನಡೆಸುವುದು ಸೂಕ್ತ ಎಂದರು.

ಸಹಪ್ರಾಧ್ಯಾಪಕರಾದ ಎಂ.ವಿ. ಸತೀಶ್‌ರವರು ಪ್ರಾಸ್ತವಿಕ ನುಡಿಯಲ್ಲಿ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ತಿಳಿಸಿಕೊಟ್ಟರು. ಎಲ್ಲಾ ಪ್ರಶಿಕ್ಷಣಾರ್ಥಿಗಳು ಹಾಗೂ ಸಹ ಪ್ರಾಧ್ಯಾಪಕರುಗಳು ಉಪಸ್ಥಿತರಿದ್ದರು.

ಅಣಕು ಸಂದರ್ಶನವನ್ನು ದಿನಾಂಕ 04–05–2023ರ ಗುರುವಾರದಂದು 41 ಪ್ರಶಿಕ್ಷಣಾರ್ಥಿಗಳಿಗೆ ನಡೆಸಲಾಯಿತು.

ಮುಖ್ಯ ಅತಿಥಿಗಳಾಗಿ ಕೆ.ಎಸ್.ಶಿವಕುಮಾರ್, ಕೆ.ಮಹಾಲಿಂಗ, ಸತೀಶ್.ಎಂ.ವಿ., ಗಂಗಾಧರ್.ಕೆ.ಎನ್. ಹಾಗೂ ಸ್ವಾತಿರವರುಗಳು ಉಪಸ್ಥಿತರಿದ್ದರು.





# ಪುನೀತ್ ರಾಜಕುಮಾರ್‌ರವರ ಜನುಮ ದಿನಾಚರಣೆ



ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ದಿನಾಂಕ 17-03-2023ರ ಶುಕ್ರವಾರದಂದು ಕರ್ನಾಟಕ ರತ್ನ ಡಾ॥ ಪುನೀತ್ ರಾಜಕುಮಾರ್‌ರವರ ಜನುಮದಿನಾಚರಣೆಯನ್ನು ಸ್ಪೂರ್ತಿ ದಿನವೆಂದು ಆಚರಿಸಲಾಯಿತು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪಿ. ಸುರೇಶ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾದ ಕೆ.ಎಸ್.ಶಿವಕುಮಾರ್, ಕೆ.ಮಹಾಲಿಂಗು, ಸತೀಶ್‌ಎಂ.ವಿ., ಗಂಗಾಧರ್ ಕೆ.ಎನ್. ಹಾಗೂ ಸ್ವಾತಿರವರುಗಳು ಉಪಸ್ಥಿತರಿದ್ದರು



ಕಾರ್ಯಕ್ರಮದ ನಿರೂಪಣೆಯನ್ನು ಪ್ರಶಿಕ್ಷಣಾರ್ಥಿ ನಿಶ್ಚಿತ.ಎಂ.ಎನ್., ಪ್ರಾರ್ಥನೆ ಯನ್ನು ಬಿಲ್ವಪ್ರಿಯಾ ಮತ್ತು ಪೂರ್ಣಿಮ, ಸ್ವಾಗತವನ್ನು ಸಿಂಧೂ, ವಂದನಾರ್ಪಣೆ ಯನ್ನು ಯೋಗೇಶ್‌ರವರುಗಳು ನಡೆಸಿ ಕೊಟ್ಟರು.

# ಅಣುಬೋಧನ ಕಾರ್ಯಾಗಾರ ಉದ್ಘಾಟನಾ ಕಾರ್ಯಕ್ರಮ




ದಿನಾಂಕ 28–03–2023ರ ಗುರುವಾರದಂದು ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಅಣುಬೋಧನೆ ಮತ್ತು ಸಂವಹನ ಕಾರ್ಯಾಗಾರದ ಉದ್ಘಾಟನಾ ಕಾರ್ಯಕ್ರಮವನ್ನು ನಡೆಸಲಾಯಿತು.

ಪ್ರಾಂಶುಪಾಲರಾದ ಪಿ.ಸುರೇಶರವರು ಮತ್ತು ಉಪನ್ಯಾಸಕರಗಳು ದೀಪವನ್ನು ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಅಧ್ಯಕ್ಷತೆಯನ್ನು ಪಿ.ಸುರೇಶರವರು ವಹಿಸಿದ್ದರು. ಸಹಪ್ರಾಧ್ಯಾಪಕರಾದ ಎಂ.ವಿ. ಸತೀಶ್‌ರವರು ಪ್ರಾಸ್ತವಿಕ ನುಡಿಯಲ್ಲಿ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ತಿಳಿಸಿಕೊಟ್ಟರು. ಎಲ್ಲಾ ಪ್ರಶಿಕ್ಷಣಾರ್ಥಿಗಳು ಹಾಗೂ ಸಹಪ್ರಾಧ್ಯಾಪಕರುಗಳು ಉಪಸ್ಥಿತರಿದ್ದರು.

# ಭಾರತ ರತ್ನ ಡಾ॥ ಬಿ.ಆರ್.ಅಂಬೇಡ್ಕರ್‌ರವರ ಜನ್ಮ ದಿನಾಚರಣೆ



ದಿನಾಂಕ 17–04–2023ರ ಸೋಮವಾರದಂದು ಭಾರತ ರತ್ನ ಡಾ॥ಬಿ.ಆರ್.ಅಂಬೇಡ್ಕರ್‌ರವರ ಜನ್ಮ ದಿನಾಚರಣೆಯನ್ನು ಎಸ್.ಎಂ.ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಚರಿಸಲಾಯಿತು. ಪ್ರಾಂಶುಪಾಲರಾದ ಪಿ. ಸುರೇಶ್‌ರವರು ಹಾಗೂ ಉಪನ್ಯಾಸಕ ವೃಂದದವರು ಡಾ॥ಬಿ.ಆರ್.ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ್ದರು.

ಉಪನ್ಯಾಸಕರಾದ ಮಹಾಲಿಂಗ.ಕೆ.ರವರು ಡಾ॥ ಬಿ.ಆರ್.ಅಂಬೇಡ್ಕರ್‌ರವರನ್ನು ಕುರಿತು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪಿ. ಸುರೇಶ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೆ.ಎಸ್.ಶಿವಕುಮಾರ್, ಸತೀಶ್‌ಎಂ.ವಿ., ಗಂಗಾಧರ್.ಕೆ.ಎನ್. ಹಾಗೂ ಸ್ವಾತಿರವರುಗಳು ಉಪಸ್ಥಿತರಿದ್ದರು

ಪ್ರಶಿಕ್ಷಣಾರ್ಥಿಗಳಾದ ಪುನೀತ್ ಪ್ರಾರ್ಥಿನೆ ಸಲ್ಲಿಸಿ, ಯೋಗೇಶ್‌ರವರು ಸರ್ವರನ್ನು ಸ್ವಾಗತಿಸಿ, ಚಂದ್ರಶೇಖರ್‌ರವರು ವಂದಿಸಿದರು. ಹಾಗೂ ಕಾರ್ಯಕ್ರಮವನ್ನು ನಿಶ್ಚಿತ.ಎಂ.ಎನ್. ಅವರು ನಿರೂಪಿಸಿದರು.

# ಸಾಹಿತ್ಯ ಸಂಭ್ರಮ
## 26–06–2023 ರಿಂದ 28–06–2023

ಅತ್ತಿಗುಪ್ಪೆ ಸಾಹಿತ್ಯ ಬಳಗದ ಮಾರೇನಹಳ್ಳಿ ಲೋಕೇಶ್‌ರವರ ಸಾರಥ್ಯದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿನ ಹಿರಿಯ ಹಾಗೂ ಕಿರಿಯ ಸಾಹಿತಿಗಳ ಆಯ್ದ ಕೃತಿಗಳನ್ನು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ನೀಡಿ ಅವುಗಳ ಅಧ್ಯಯನ ಮಾಡಿ ಪ್ರಬಂಧಗಳನ್ನು ರಚಿಸಿ, ಅವರು ರಚಿಸಿದ ಪ್ರಬಂಧಗಳನ್ನು ಮಂಡಿಸಲು ಮೂರು ದಿನಗಳ ಸಾಹಿತ್ಯ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಸಾಹಿತ್ಯ ಸಂಭ್ರಮದಲ್ಲಿ ಮಂಡಿಸಿದ ಪ್ರಬಂಧಗಳನ್ನು ಹಾಗು ಸಂಬಂದಿಸಿದ ಹೆಚ್ಚಿನ ಮಾಹಿತಿಯನ್ನು ಎಸ್.ಸಿ.ಚಿಕ್ಕಣ್ಣಗೌಡ ಸಂಸ್ಮರಣ ಸಾಹಿತ್ಯ ಸಂಭ್ರಮ ಮಾಲಿಕೆ–1 ಎಂಬ ಹೆಸರಿನಲ್ಲಿ ಗ್ರಾಮಭಾರತಿ ಪ್ರಕಾಶನದ ವತಿಯಿಂದ ಕೃತಿಯನ್ನು ಹೊರತರಲಾಗುತ್ತಿದೆ.

**ಪ್ರಬಂಧ ಮಂಡಿಸಿದ ಪ್ರಶಿಕ್ಷಣಾರ್ಥಿಗಳು**














# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರಗಳಿಗೆ ಭೇಟಿ



ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ದಿನಾಂಕ 26–07–2023ರಂದು ಕೃಷ್ಣರಾಜಪೇಟೆ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರಗಳಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳ ಮಾಹಿತಿ ಸಂಗ್ರಹಿಸಿದರು.



# ವಸತಿ ಶಾಲೆಗಳಗೆ ಭೇಟಿ




ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ದಿನಾಂಕ 28–07–2023ರಂದು ಕೃಷ್ಣರಾಜಪೇಟೆ ತಾಲ್ಲೂಕಿನ ಗವಿಮಠ, ಮಾರ್ಗೋನಹಳ್ಳಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಶೆಟ್ಟನಾಯಕನಕೊಪ್ಪಲುವಿನಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಹೆಣ್ಣು ಮಕ್ಕಳ ವಸತಿ ಶಾಲೆಗಳಿಗೆ ಭೇಟಿ ನೀಡಿ ಶೈಕ್ಷಣಿಕ ಚಟುವಟಿಕೆಗಳ ಮಾಹಿತಿ ಸಂಗ್ರಹಿಸಿದರು.



# ಅಂಧ ಮತ್ತು ಶ್ರವಣ ದೋಷವುಳ್ಳ ಮಕ್ಕಳ ಶಾಲೆ



ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ದಿನಾಂಕ 02–08–2023ರಂದು ಮೈಸೂರಿನ ತಿಲಕ ನಗರದಲ್ಲಿರುವ ಅಂಧ ಮತ್ತು ಶ್ರವಣದೋಷವುಳ್ಳ ಮಕ್ಕಳ ಶಾಲೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು.



# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯಕ್ಕೆ ಭೇಟಿ



ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳ ಹಿನ್ನೆಲೆಯಲ್ಲಿ ದಿನಾಂಕ 14–08–2023ರಂದು ಮಂಡ್ಯ ಜಿಲ್ಲಾ ಕೇಂದ್ರದಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗೆ ಭೇಟಿ ನೀಡಿ ಅಲ್ಲಿನ ಕಾರ್ಯಚಟುವಟಿಕೆಗಳ ಮಾಹಿತಿಗಳನ್ನು ಸಂಗ್ರಹಿಸಿದರು.



# 77ನೇ ಸ್ವಾತಂತ್ರ್ಯ ದಿನಾಚರಣೆ



ದಿನಾಂಕ 15–08–2023ರ ಮಂಗಳವಾರದಂದು 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಗ್ರಾಮಭಾರತಿ ವಿದ್ಯಾಸಂಸ್ಥೆ ಹಾಗೂ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಚರಿಸಲಾಯಿತು. ಧ್ವಜಾರೋಹಣವನ್ನು ನೆರವೇರಿಸಿದ ಎರಡೂ ಸಂಸ್ಥೆಗಳ ಅಧ್ಯಕ್ಷರಾದ ಶ್ರೀಯುತ ಎಸ್.ಸಿ.ಕಿರಣ್‌ಕುಮಾರ್‌ರವರು ಎಲ್ಲರಿಗೂ ಸ್ವಾತಂತ್ರ್ಯೋತ್ಸವದ ಶುಭ ಕೋರಿ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಿದರು.

ಎರಡು ಸಂಸ್ಥೆಗಳ ಮಕ್ಕಳು ಹಾಜರಿದ್ದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಎಲ್ಲಾ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರಿಗೂ ಸಿಹಿಯನ್ನ ವಿತರಿಸಲಾಯಿತು.

# ಸಂವಿಧಾನ ಓದು



09/09/2023ರ ಶನಿವಾರದಂದು 'ಸಂವಿಧಾನ ಓದು' ಪುಸ್ತಕವನ್ನು ಕುರಿತು ಕಾಲೇಜಿನ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಂದ ಪ್ರಬಂಧ ರಚನೆ ಮಾಡಿಸಲಾಯಿತು.





ದಿನಾಂಕ 06/10/2023ರಂದು 'ಸಂವಿಧಾನ ಓದು' ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಉಚ್ಚನ್ಯಾಯಾಲ–ಯದ ನಿವೃತ್ತ ನ್ಯಾಯಮೂರ್ತಿಗಳಾದ ನಾಗಮೋಹನ ದಾಸ್‌ರವರು ಬಹುಮಾನ ವಿತರಿಸಿದರು. ನ್ಯಾಯಮೂರ್ತಿಗಳು ಸಂವಿಧಾನ ಕುರಿತು ಉಪನ್ಯಾಸ ನೀಡಿದರು. ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಿ.ಇಡಿ. ಪ್ರಶಿಕ್ಷಣಾರ್ಥಿಯಾದ ವಿದ್ಯಾ.ಎಚ್.ವಿ. ರವರು ಪ್ರಥಮ ಬಹುಮಾನ, ದ್ವಿತೀಯ ಬಿ.ಇಡಿ.ಯ ರಕ್ಷಿತ.ಆರ್.ರವರು ದ್ವಿತೀಯ ಬಹುಮಾನ ಹಾಗೂ ಪ್ರಥಮ ಬಿ.ಇಡಿ.ಯ ರಮ್ಯ.ಎಂ. ತೃತೀಯಾ ಬಹುಮಾನಗಳನ್ನು ಸ್ವೀಕರಿಸಿದರು.

# ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಬೀಳ್ಕೊಡುಗೆ ಹಾಗೂ 'ಸಾಹಿತ್ಯ ಸಂಭ್ರಮ' ಕರಡು ಪ್ರತಿ ಬಿಡುಗಡೆ ಸಮಾರಂಭ




ದಿನಾಂಕ 20–10–2023ರ ಶುಕ್ರವಾರದಂದು ಪ್ರಥಮ ಬಿ.ಇಡಿ. ಪ್ರಶಿಕ್ಷಣಾರ್ಥಿಗಳು ದ್ವಿತೀಯ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಿದರು. ಅದೇ ಕಾರ್ಯಕ್ರಮದಲ್ಲಿ ದಿನಾಂಕ 26–.6–2023 ರಿಂದ 28–06–2023 ರವರೆಗೆ ಜರುಗಿದ ಸಾಹಿತ್ಯ ಸಂಭ್ರಮದಲ್ಲಿ ಮಂಡಿಸಿದ ಪ್ರಬಂಧಗಳನ್ನೊಳಗೊಂಡ ಸಾಹಿತ್ಯ ಸಂಭ್ರಮ ಕೃತಿಯ ಕರಡು ಪ್ರತಿಯನ್ನು ಕೃಷ್ಣರಾಜಪೇಟೆ ತಾಲ್ಲೂಕಿನ ಹಿರಿಯ ಸಾಹಿತಿಗಳು, ವಿಮರ್ಶಕರು ಮತ್ತು ನಿವೃತ್ತ ಪ್ರಾಂಶುಪಾಲರಾದ ಶಿ.ಕುಮಾರಸ್ವಾಮಿಯವರು ಬಿಡುಗಡೆಗೊಳಿಸಿದರು. ಸಾಹಿತ್ಯ ಸಂಭ್ರಮ ಕೃತಿಯ ಸಂಪಾದಕರಾದ ಮಾರೇನಹಳ್ಳಿ ಲೋಕೇಶ್‌ರವರು ಹಾಜರಿದ್ದರು. ಗ್ರಾಮಭಾರತಿ ವಿದ್ಯಾಸಂಸ್ಥೆ ಹಾಗೂ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ನ ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾತೃಶ್ರೀ ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಕೆ.ಎಸ್.ಸೋಮಶೇಖರ್ ಅವರುಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ದ್ವಿತೀಯ ಬಿ.ಇಡಿ. ಪ್ರಶಿಕ್ಷಣಾರ್ಥಿಗಳಿಗೆ ನೆನಪಿನ ಕಾಣಿಕೆ ಹಾಗು ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರುಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ನಂತರ ಭೂರಿ ಬೋಜನ ಏರ್ಪಡಿಸಲಾಗಿತ್ತು.

# ಜ್ಞಾನ ಲೋಕ

# “ನವಮನದ ಮಾತು ಫಲಕ”ದಲ್ಲಿ ಪ್ರಕಟಗೊಂಡ ಆಯ್ದ ಕವನಗಳು ಮತ್ತು ಲೇಖನಗಳು,

# ಕನ್ನಡ ವಿಭಾಗ

## ಪದ್ಯ


1. ಗುರು – 53
2. ಶಿಕ್ಷಣ – 54
3. ನನ್ನ ಅಪ್ಪ – 55
4. ಪ್ರೀತಿಯ ಒಡೆಯ ನನ್ನ ಅಪ್ಪ – 56
5. ಅವ್ವ – 57
6. ಜೀವನ – 57
7. ಅಪ್ಪ–ಅಮ್ಮ – 59
8. ಯುಗಾದಿ – 60
9. ಇರುವೆ ಸಾಲು – 61
10. ಪ್ರೀತಿಗೆ ಹೆಸರು ಬೇಕೆ? – 62
11. ಕನ್ನಡ – 63
12. ತಾರೆಗಳ ಪ್ರಪಂಚ – 64
13. ಅಮ್ಮ ಬರೆದ ಡೈರಿ – 65


## ಗದ್ಯ


1. ನಿಮಗಿದು ತಿಳಿದಿದೆಯೇ? – 67
2. ಜೀವನ ಎಂದರೇನು? – 68
4. ಸದಾ ನೆನಪಿನಲ್ಲಿಡಬೇಕಾದ ಮೂರು ವಿಷಯಗಳು – 69
5. ಮೂರು ಅಕ್ಷರದ ಮಾನವ – 70
6. ಯುವ ಶಕ್ತಿಯೇ ದೇಶದ ಶಕ್ತಿ – 71


## ಸೂಕ್ತಿ ಸಂಗ್ರಹ


1. ಚಿನ್ನದಂತ ಸಾಲುಗಳು – 72
2. ಗೆಲುವಿನ ರಹಸ್ಯ – 73
3. ಶುಭನುಡಿ – 74
4. ಕೆಲವು ಜಿಲ್ಲೆಗಳಿಗಿರುವ ವಿಶೇಷ ಹೆಸರುಗಳು – 75
5. ನಿತ್ಯ ಸತ್ಯ – 76



**ಶೇತಾ.ಆರ್.ಎಂ.**

ದ್ವಿತೀಯ ಬಿ.ಇಡಿ.

# ಗುರು

ಕಲಿಸು ಗುರುವೇ ಕಲಿಸು
ಕಲಿಸು ನೀ ಸದ್ಗುರವೇ ಕಲಿಸು
ಸುಳ್ಳಿನ ನಡುವೆ ನಾ ಸತ್ಯವನಾಡಲು ಕಲಿಸು
ಸ್ವಾರ್ಥದ ನಡುವೆ ನಿಸ್ವಾರ್ಥಿಯಾಗಿರಲು ಕಲಿಸು
ಅಂಜಿ ನಡೆದವರ ನಡುವೆ ಧೀರನಾಗಲು ಕಲಿಸು
ಧರೆಯ ದುಷ್ಟರ ನಡುವೆ ಜಾಣನಾಗಲು ಕಲಿಸು ||

ಬೆವರಿಳಿಸಿ ಗಳಿಸಿದ ಒಂದು ಕಾಸು
ಮಿಕ್ಕ ಹತ್ತಕ್ಕಿಂತ ಮಿಗಿಲೆಂಬುದು ಕಲಿಸು
ಸೋಲು ಗೆಲುವಿನಲ್ಲೂ ಸಮಚಿತ್ತದಿಂದಿರಲು
ಶತ್ರುಗಳಿಗೂ ಸನ್ಮಿತ್ರನಾಗಿರಲು ಕಲಿಸು
ಹಸಿರು ಮಲೆ ಹೂವಲಿ ನಾ ಧ್ಯಾನಿಸುವುದ ಕಲಿಸು
ಜಾಣನಾಗಲು ಕಲಿಸು ||

ಎಲ್ಲರೂ ಒಂದಾಗಿ ನಡೆದರೂ ಸರಿಯೇ
ನನ್ನನ್ನೇ ನಾ ನಂಬುವ ಬಗೆ ನೀ ಕಲಿಸು
ಅಳುವಿನಲಿ ಅವಮಾನ ಇಲ್ಲೆಂಬುದು ಕಲಿಸು
ನನ್ನನ್ನೇ ನಾ ನೋಡಿ ನಗುವುದನು ಕಲಿಸು
ಮಾನವೀಯತೆಯಲಿ ನಾ ಕರಗುವುದನು ಕಲಿಸು
ಜಾಣನಾಗಲು ಕಲಿಸು ||



ಶೇತಾ.ಆರ್.ಎಂ.
ದ್ವಿತೀಯ ಬಿ.ಇಡಿ.

# ಶಿಕ್ಷಣ

ಶಿಕ್ಷಣವಾಯಿತು ವ್ಯಾಪಾರ
ಕಳ್ಳ ಖದೀಮರ ವ್ಯಾಪಾರ
ನೀತಿ ಮೌಲ್ಯಗಳು ಮಾಯವಾದವು
ಪೈಪೋಟಿಯೇ ಶಿಕ್ಷಣದ ಗುರಿ
ಹಣ ದೋಚುವುದೇ ಎಲ್ಲರ ಗುರಿಯು
ಸರಕಾರವು ಕೊಡುತ್ತಿದೆ ಸಮವಸ್ತ್ರ
ಬಿಸಿಯೂಟದ ಜೊತೆ ಕಾಗದ ಪತ್ರ
ಎಲ್ಲಾ ಬಿಟ್ಟು ಪಾಲಕರು ಖಾಸಗಿ
ಶಾಲೆಗೆ ಅಟ್ಟುತ್ತಿರುವರು ಮಕ್ಕಳನ್ನು
ಕನ್ನಡ ತಾಯಿಯ ಕೊಲ್ಲುತಿರುವರು
ಇಂಗ್ಲೀಷ್ ಮಾತಿಗೆ ಮರುಳಾಗಿರುವರು
ಗಳಿಕೆಯ ಎಣಿಕೆಯ ಮಳ್ಳರು ಇವರು
ಕನ್ನಡ ಮಾತೆಗೆ ಜಯ ಜಯ ಎನ್ನುವರು
ಹಾದಿಲಿ ಹೋಗುವವರನು ಅಪ್ಪ ಅನ್ನುವರು
ತನ್ನ ಅಪ್ಪಗೆ ಬೆಪ್ಪ ಎನ್ನುವರು......
ಇದೇ ಇಂದಿನ ಶಿಕ್ಷಣ



**ಸಹನ.ಎ.ಎನ್.**

ದ್ವಿತೀಯ ಬಿ.ಇಡಿ.

# ನನ್ನ ಅಪ್ಪ

ನಾ ಹುಟ್ಟುವ ಮುಂಚೆಯೇ ಸಾವಿರಾರು ಕನಸು ಕಟ್ಟುತ್ತಾ
ನಾ ಹುಟ್ಟುವ ದಿನಕ್ಕಾಗಿಯೇ ಕಾಯುತ ಕುಳಿತು
ನಾ ಅಂಬೆಗಾಲಿಡುವಾಗ ಸಂತಸ ಪಟ್ಟು
ನನ್ನ ಬೆರಳಿಡಿದು ನನ್ನ ಜೊತೆ ಜೊತೆಯಲ್ಲಿಯೇ ಹೆಜ್ಜೆ ಹಾಕುತ್ತಾ
ನನ್ನ ಹೆಗಲ ಮೇಲೆ ಕೂರಿಸಿ ಜಗವನ್ನೆ ತೋರಿಸುತ್ತಾ
ಸರಿ ತಪ್ಪು ಒಳಿತು ಕೆಡುಕುಗಳ ಬಗ್ಗೆ ತಿಳಿಸುತ್ತಾ ಬಂದೆ
ನೀ ಎಷ್ಟೇ ದೂರ ಹೋದರು
ನೀ ಬಿಟ್ಟು ಹೋದಂತಹ ನೆನಪಿನೊಂದಿಗೆ ನಾ
ಜೀವಿಸುತ್ತಾ ನೀ ಕಂಡ ಕನಸಿನತ್ತ
ನಾ ಹೆಜ್ಜೆ ಹಾಕುತ್ತ ನೀ ಆಸೆಪಟ್ಟಂತೆಯೇ
ಸಂತಸದ ಜೀವನವನ್ನು ನಡೆಸುತ್ತಿದ್ದೇನೆ
ಅಪ್ಪ



ಸಹನ.ಎ.ಎನ್.

ದ್ವಿತೀಯ ಬಿ.ಇಡಿ.

## ಪ್ರೀತಿಯ ಒಡೆಯ ನನ್ನ ಅಪ್ಪ

ಏನೆಂದು ನಾ ಬರೆಯಲಿ
ಪ್ರೀತಿಯ ಒಡೆಯನ ಬಗ್ಗೆ
ಶ್ರೀಮಂತನಲ್ಲದಿದ್ದರು
ಶ್ರೀಮಂತನೆ ನನ್ನ ಬದುಕಿಗೆ
ದೀಪದಂತೆ ನನ್ನ ಬಾಳಿಗೆ
ನಿನ್ನ ನೆರಳೆ ಸಾಕೆನಗೆ
ಸುಂದರ ಬದುಕಿಗೆ
ನಿನ್ನ ಪ್ರೀತಿಯೇ ಸಾಕೆನಗೆ
ಈ ಜೀವನ ಸಾಕಲಿಕ್ಕೆ
ನನ್ನ ಜೀವನದ ಜೀವ
ನನ್ನೆದೆಯೊಳಗಿನ ಭಾವ
ಗಂಧದಂತೆ ತನ್ನ
ಬಾಳನ್ನೆಲ್ಲ
ನಮಗಾಗಿ ತೇಯ್ದು
ಯುಗಪುರುಷ



ಅರ್ಚನ.ಎಲ್.ಎನ್.
ದ್ವಿತೀಯ ಬಿ.ಇಡಿ.

## ಅವ್ವ

ಹುಡುಕುವೆ ಎಲ್ಲಿ ನೀ ಹುಡುಕುವೆ ಎಲ್ಲಿ
ಎಲ್ಲಿ ಇರುವನಯ್ಯಾ ದೇವರು ?
ಇರುವಳು ಮನೆಯಲ್ಲೆ ದೇವತೆಯು
ನಮಿಸು ಅವಳಿಗೆ ನೀ ಉಳಿಯುವಿಯೋ
ಅವಳ ಪಾದದಡಿಯ ದೂಳೆ ನಿನಗೆ
ಭಸ್ಮವಯ್ಯ ಹಣೆಗೆ ತಿಲಕವಯ್ಯ

ಗರ್ಭದ ಗುಡಿಯವರ ಮನಸ್ಸು
ಶುಚಿಯಾಗಿಹ ಅವಳ ದುಃಖವ ತೆಗೆದು
ದುಃಖವ ತಾ ಉಂಡು ಸುಖವನು ಧಾರೆ ಎರೆದು
ನಿನಗಾಗಿ ತನ್ನ ಜೀವನವ ತೇಯ್ದು
ಭೂಮಿಗೆ ಬಂದ ಶಾಂತಮೂರ್ತಿ ತಾಯಿಯಯ್ಯ
ತಾಯಿ...... ತಾಯಿ.....

ಜಗದಲ್ಲಿರುವ ಸುಖವನು ತೊರೆಯುತ
ಮಗುವಿನ ನಗುವಿನಲ್ಲಿ
ನೋವನು ಮರೆಯುವ
ಒಂಭತ್ತು ತಿಂಗಳು ನೋವನು ತಡೆಯುತ
ಜೀವನ ಭಿಕ್ಷೆ ನೀಡಿಹಳು ತಾಯಿಯಯ್ಯ
ತಾಯಿ.... ತಾಯಿ.... ತಾಯಿ.... ತಾಯಿ....

## ಜೀವನ

ಜೀವನ ಇರುವುದೇ ಒಂದು ತಾಸು
ಇದಕ್ಕೆ ಏನೂ ಮಾಡಿದರೂ ಲೇಸು
ಜೀವನದಲ್ಲಿ ಹೆಚ್ಚಾಗಬಾರದು ಕಾಸು
ಕಾಸಾಗುವುದು ಸೋಮಾರಿತನಕ್ಕೆ ಪಾಸು

ಪಾಸಾಗಬೇಕು ಜೀವನ ಪರೀಕ್ಷೆ
ಇಟ್ಟುಕೊಂಡಿರಬೇಕು ಪಾಸಾಗುವ ನಿರೀಕ್ಷೆ
ಅರಿತು ನಡೆಯಬೇಕು ನಮ್ಮ ಕಕ್ಷೆ
ಅರಿಯದಿದ್ದರೆ ಖಚಿತವಾಗಿ ಬೀಳುವುದು ಆಸ್ಥೆ

ಆಸ್ಥೆ ಬಿದ್ದ ಮೇಲೆ ಮುಗಿಯಿತು ಅರ್ಧ ಜೀವನ
ಮಾಡಿಕೊಳ್ಳಬೇಕು ಇಲ್ಲಿ ಜೀವನ ಪಾವನ
ತಿಳಿಯಬೇಕು ಆತ್ಮೀಯರ ಮನ
ಅಲ್ಲಿಗೆ ಮುಗಿಯುವುದು ಯೌವ್ವನ

ಸೇರುವುದು ಆತ್ಮೀಯ ಎರಡು ಮುತ್ತು
ಆಗುವುದು ಹೊಸದೊಂದು ಜೀವದ ಹುಟ್ಟು
ಅಪ್ಪ ಅಮ್ಮ ಎಂದು ಬರುವುದು ಕೂಗು
ನೋಡಬೇಕು ಮುಂದಿನ ಆಗು–ಹೋಗು

ಆರಂಭವಾಗುವುದು ರಾಮಾಯಣ
ಕೇಳಲಾಗುವುದಿಲ್ಲ ದಿನ–ದಿನ
ಇರುವೇ ನೋವಿನ ಕ್ಷಣ–ಕ್ಷಣ
ಅರ್ಥವಾಗುವುದು ಜೀವನ ಕಣ–ಕಣ

ವೃದ್ಧಾಪ್ಯ ಜೀವನದ ಅಂತಿಮ ಘಟ್ಟ
ಹಿಡಿಯಬೇಕು ಭಗವದ್ಗೀತಾ
ಪಡಬೇಕು ಓದದ ವ್ಯಥೆ
ಓದಿದರೆ ಜೀವನ ಸಾರ್ಥಕತೆ

ಅಲ್ಲಿಗೆ ಮುಗಿಯುವುದು ವೃದ್ಧಾಪ್ಯ
ಕಾದಿರುವುದು ಪರಲೋಕ ಆದಿತ್ಯ
ಮೃತ್ಯುವಿನ ಕರೆ
ದೇಹ ನಾಲ್ಕು ಜನರಿಗೆ ಹೊರೆ.



ನಿಶ್ಚಿತ.ಎಂ.ಎನ್.
ದ್ವಿತೀಯ ಬಿ.ಇಡಿ.

# ಅಪ್ಪ – ಅಮ್ಮ

ನಿಮ್ಮಿಂದ ನಾನು ಜನ್ಮ ಪಡೆದೆ
ನಿಮ್ಮಿಂದ ನಾನು ಲೋಕ ಕಂಡೆ
ನೀವೆ ನನ್ನ ಗುರುಗಳು
ನೀವೆ ನನ್ನ ಸ್ನೇಹಿತರು
ನಮಗೆ ಕಷ್ಟ ಬರದ ಹಾಗೆ
ನೀವೇ ಎಲ್ಲಾ ಕಷ್ಟಗಳನ್ನು ಸಹಿಸುತ್ತಾ
ನಮ್ಮನ್ನು ಬೆಳೆಸಿದಿರಿ
ನಮ್ಮ ಏಳ್ಗೆಗಾಗಿ ಪ್ರೋತ್ಸಾಹಿಸಿದಿರಿ
ಏಳೇಳು ಜನ್ಮಕ್ಕೂ ನೀವೇ
ನನ್ನ ತಂದೆ ತಾಯಿ ಆಗಬೇಕು
ಎನ್ನುವುದೇ ನನ್ನ ಮಹದಾಸೆ
ನಮಗೋಸ್ಕರ ನೀವು ದಿನನಿತ್ಯ ಕಷ್ಟಪಡುವಿರಿ
ನಮ್ಮಗುರಿ ತಲುಪಲು ಧೈರ್ಯ ತುಂಬುವಿರಿ
ನಮ್ಮ ಖುಷಿಯಲ್ಲಿ ನಿಮ್ಮ ಖುಷಿಯನ್ನು ಕಾಣುತ್ತಾ
ಬಾಳು ಸಾಗಿಸುತ್ತಿರುವಿರಿ
ನಮ್ಮ ಈ ಬಾಳು ನಿಮ್ಮಿಂದ
ಈ ಸಮಾಜದಲ್ಲಿ ಉನ್ನತ ಪ್ರಜೆಯಾಗು
ಕೆಟ್ಟದ್ದನ್ನು ಕಲಿಯದಿರು ಎಂದು ಹೇಳುವಿರಿ
ನಿಮ್ಮ ನಿಷ್ಕಲ್ಮಶ ಪ್ರೀತಿ ಹೃದಯಕ್ಕೆ ನಾ ಕಟ್ಟಲಿಲ್ಲ ಗುಡಿ
ನಿಮ್ಮ ನಿಸ್ವಾರ್ಥ, ಪ್ರೀತಿ, ತ್ಯಾಗ, ಮಮತೆಗೆ
ನನ್ನ ಮನ ಯಾವಾಗಲೂ ಚಿರಋಣಿ
ಈ ಜನ್ಮದಲ್ಲಿ ನಿಮ್ಮ ಋಣ ತೀರಿಸಲಾಗದು ಅಪ್ಪ – ಅಮ್ಮ



**ಶಾರದ.ಎಸ್.**
ದ್ವಿತೀಯ ಬಿ.ಇಡಿ.

## ಯುಗಾದಿ

ಯುಗಾದಿ ಹಬ್ಬದ ಸವಿ
ಬೇವು–ಬೆಲ್ಲದ ಸಿಹಿ
ಸವಿದವರಿಗೆ ಗೊತ್ತು
ಆ ಕಹಿಯ ಸಿಹಿ

ಹೊಸತನ್ನು ತರುವ ಈ ವರುಷ
ವರುಷವಿಡೀ ನಮಗೆ ಹರುಷ
ಈ ವರುಷದ ಹೊಸತನ
ಎಲ್ಲರಿಗೂ ತರಲಿ ಶಾಶ್ವತವಾದ ಸಿರಿತನ

ಈ ಯುಗಾದಿ ಹೊಸದೊಂದು ಬಾಳಿಗೆ
ವರುಷದ ಮೊದಲ ಹೋಳಿಗೆ
ಈ ಹೋಳಿಗೆಯ ಹೂರಣ
ಯುಗಾದಿ ಹಬ್ಬಕ್ಕೆ ಆಭರಣ

ಬೇವು ನೊಂದವರ ಕಹಿಯ ಅನುಭವ
ಬೆಲ್ಲ ಸಿಹಿ ಉಂಡವರ ಸುಖೀ ಜೀವನ
ಆದರೆ ಇವೆರಡು ಸೇರಿದ ಸವಿರುಚಿ
ಮರೆಯಲಾಗದ ಮಧುರವಾದ ಅಭಿರುಚಿ

ಯುಗಾದಿ ಎಂಬುದು
ಯುಗ–ಯುಗಕ್ಕೂ ಹೊಸತನ್ನು ತರುವ
ವಸಂತ ಕಾಲದ ಚಿಗುರಿನಂತೆ
ಯುಗಾದಿ ಹಬ್ಬದಲ್ಲಿ ಹಚ್ಚಿದ ದೀಪ
ಮುಂದಿನ ಜೀವನಕ್ಕೆ ದಾರಿ ತೋರುವ
ಹೊಸದೊಂದು ರೂಪ

ಬನ್ನಿ...... ಎಲ್ಲರು ಒಟ್ಟಿಗೆ ಸೇರೋಣ ಒಂದಾಗಿ ಬಾಳೋಣ,
ಕಾರಣ..... ಯುಗಾದಿ ಒಂದು ದಿನದ ಸಂಭ್ರಮವಲ್ಲ
ಅದು..... ಯುಗ–ಯುಗದ ಅಂತ್ಯ ಹಾಗೂ ಆರಂಭ
ಬೇವು–ಬೆಲ್ಲದ ಸವಿ ನೀಡುವ ಈ ಯುಗಾದಿ
ಪ್ರತಿಯೊಬ್ಬ ಮನುಷ್ಯನ ಹೊಸ ಜೀವನಕ್ಕೆ ಹಾದಿ
ಆದರೆ..... ಇದು ಸರ್ವರಿಗೂ ನೆನಪಿರಲಿ
ಸಾರ್ವಕಾಲಿಕ ಸತ್ಯವಾಗಿ ಉಳಿದಿರಲಿ
ಯುಗಾದಿ..... ವರುಷದ ಹಾದಿ ಯುಗಾದಿ.......



ಶಾರದ.ಎಸ್.
ದ್ವಿತೀಯ ಬಿ.ಇಡಿ.

## ಇರುವೆ ಸಾಲು

ಸಾಲಾಗಿ ಚಲಿಸುತ್ತಿರುವ ಇರುವೆಗಳು
ನೋಡಲು ಸಾವಿರಾರು
ಎಣಿಕೆಗೆ ಮೀರಿದ್ದು
ಎಣಿಸಲು ಹೋದರೆ ಲೆಕ್ಕಕ್ಕೆ ಸಿಗದು
ನಾನು ತುಂಬಾ ಪ್ರಯತ್ನಿಸಿದೆ
ಅವುಗಳ ಬಗ್ಗೆ ತಿಳಿಯಲು
ಆದರೆ ಇಂದಿಗೂ ಸರಿಯಾಗಿ ತಿಳಿಯದು
ಅವಗಳಲ್ಲಿರುವ ಆ ಒಗ್ಗಟ್ಟು
ನಮಗೆ ಎಂದಿಗೂ ಬಿಡಿಸಲಾಗದ ಒಗಟು
ಅವುಗಳಲ್ಲಿರುವ ಸಹಕಾರ
ನಮ್ಮಲ್ಲಿ ಕೇವಲ ವ್ಯವಹಾರ
ಅವುಗಳ ಸಾಲು ಆಹಾರದ ಸಂಗ್ರಹಣೆಗಾಗಿ
ತಮ್ಮ ಪ್ರಾಣದ ರಕ್ಷಣೆಗಾಗಿ
ಅವುಗಳಲ್ಲಿರುವ ಆತ್ಮೀಯತೆ
ನಮ್ಮಲ್ಲಿರುವ ದೊಡ್ಡಕೊರತೆ
ಮತ್ತೊಮ್ಮೆ ಯೋಚಿಸಿದೆ
ನಾವೇಕೇ? ಅವುಗಳ ಹಾಗೆ ಆಗಲಿಲ್ಲ
ನಮಗೇಕೆ ? ಇಲ್ಲ ಆ ತಾಳ್ಮೆ
ಅಂತಹ ಸಂತಸದ ಬಾಳ್ಮೆ
ಆ ಪುಟ್ಟಗಾತ್ರದ ಜೀವಿಯ ಸಾಹಸ
ನಿಜಕ್ಕೂ ವೀಕ್ಷಿಸಿದರೆ ಸಂತಸ
ಎಂದೆಂದಿಗೂ ಅಳಿಸಲಾಗದ ಅವುಗಳ ಸಾಲು
ನಮಗೆ ತಿಳಿಯದ ಬಾಳು
ಇದುವೇ ಇರುವೆ ಸಾಲು



**ಸಚಿನ್.ಕೆ.**
ದ್ವಿತೀಯ ಬಿ.ಇಡಿ.

# ಪ್ರೀತಿಗೆ ಹೆಸರು ಬೇಕೆ.....?

ಜಗವೆಲ್ಲ ಜೀವಿಸಲು
ಉಸಿರು ಕೊಡುವ
ಗಾಳಿಯ ಶುದ್ಧ
ಪ್ರೀತಿಗೆ ಹೆಸರು ಬೇಕೆ..?

ಯಾವ ಆಕ್ಷೇಪಣೆ ಅಪೇಕ್ಷೆಯಿಲ್ಲದೆ
ನೀಡುವ ತಮ್ಮ ಸಮಸ್ತವನ್ನ
ಧಾರೆ ಎರೆಯುವ ಹೆತ್ತವರ
ಪ್ರೀತಿಗೆ ಹೆಸರು ಬೇಕೆ..?

ಬಾಳ ಬೆಳಗಲು
ದಿನನಿತ್ಯ ಉರಿಯುತ
ಬರುವ ಆ ಸೂರ್ಯನ
ಪ್ರೀತಿಗೆ ಹೆಸರು ಬೇಕೆ..?

ತನ್ನದೇನಿದ್ದರು
ನಮಗಾಗಿ ಜೀವನ ತೇಯ್ದು
ಗುರುಗಳ ನಿಸ್ವಾರ್ಥ
ಪ್ರೀತಿಗೆ ಹೆಸರು ಬೇಕೆ..?

ನನಸಾಗದಿದ್ದರು
ತನ್ನೆ ಅವ ಉಣಬಡಿಸುವ
ಕನಸುಗಳ ವಿಶ್ವಾಸದ
ಪ್ರೀತಿಗೆ ಹೆಸರು ಬೇಕೆ..?

ಕೊನೆಯ ಉಸಿರಿರುವವರೆಗು
ನಾನಿರುವೆನೆಂಬ ಆಶಯ
ನೀಡುವ ಗೆಳೆಯನ
ಪ್ರೀತಿಗೆ ಹೆಸರು ಬೇಕೆ..?

ಎಲ್ಲಿಯೇ ನೀ ದಣಿದರು
ಬಿಟ್ಟು ದೂರ ಇದ್ದರು
ನೀನೆ ಮರೆತೋದರು
ನಿನ್ನ ಮರು ಆಗಮನಕೆ ಕಾದು
ನಿಷ್ಕಲ್ಮಶ ಪ್ರೀತಿ ಗೌರವ ನೀಡುವ
ಕನ್ನಡ ತಾಯಿಯ
ಪ್ರೀತಿಗೆ ಹೆಸರು ಬೇಕೆ..?



**ಚಾಂದಿನಿ. ಎ**
**ದ್ವಿತೀಯ ಬಿ.ಇಡಿ.**

## ಕನ್ನಡ

ಕರ್ನಾಟಕದ ಭಾಷೆ
ಕನ್ನಡಿಗರ ಮನಹೊಕ್ಕುವ ಭಾಷೆ
ವಿದೇಶಿಗರ ಮನಸೆಳೆವ ಭಾಷೆ
ಮನೆಮನೆಗಳಲ್ಲಿ ಮಾತಾಡುವ ಭಾಷೆ
ಮಕ್ಕಳು ಭಾವನೆಗಳ ಅಭಿವ್ಯಕ್ತಿಗೊಳಿಸುವ ಭಾಷೆ
ಭಾವನೆಗಳ ಮನತುಂಬಿ ವಿವರಿಸುವ ಭಾಷೆ
ಪದಗಳಲ್ಲಿಯೇ ಎಲ್ಲರ ಹೃದಯ ಗೆಲ್ಲುವ ಭಾಷೆ
ಎರಡು ಸಾವಿರ ವರ್ಷಗಳ ಇತಿಹಾಸವುಳ್ಳ ಭಾಷೆ
ಸವಿಸ್ತಾರವಾಗಿ ಕನ್ನಡಿಗರ ಮನಸ್ಸಲ್ಲಿ ಹರಡಿರುವ ಭಾಷೆ
ಓದುಗರ ಮನಸೆಳೆಯುವ ಭಾಷೆ
ಕಲಿಯುವವರ ಮನದ ಒಡತಿ
ನಮ್ಮ ಕನ್ನಡ ಭಾಷೆ.

# ತಾರೆಗಳ ಪ್ರಪಂಚ



☆ ☆ ☆ ನನ್ನ ಕಂಗಳಿಗೆ ಪ್ರತಿ ರಾತ್ರಿಯೂ ಹಬ್ಬವೇ
ಏಕೆಂದರೆ ಪ್ರತಿ ರಾತ್ರಿ ನೀ ಬರುವೆ.
ಇರುಳೆಲ್ಲ ಅಲಂಕಾರ ಭೂಷಿತಳಾಗಿ ಕಂಗೊಳಿಸುವ ನೀನು,
ಹಗಲಲ್ಲೇಕೆ ಕಣ್ಮರೆಯಾಗುವೆ ?..
ನಿನ್ನನ್ನು ಎಷ್ಟು ಬಾರಿ ನೋಡಿದರೂ ಸಾಲದು,
ನಿನ್ನೊಡನೆ ಎಷ್ಟು ಮಾತನಾಡಿದರೂ ಸಾಲದು.
ನನ್ನೆಲ್ಲ ಮನದಾಳದ ಮಾತುಗಳನ್ನು ನೀ ಆಲಿಸುವೆ,
ನನಗೆ ಬೇಸರವಾದಾಗ ನೀ ಮಿನುಗುತಲಿ ಖುಷಿಪಡಿಸುವೆ.
ಹಗಲಿನ ದಂಭಾಚಾರ ಸಮಾಜಕ್ಕಿಂತ,
ಇರುಳಿನ ನಿನ್ನೊಂದಿಗಿನ ಅನುಬಂಧ ಅನಂತ.
ಕಲ್ಮಶ ತುಂಬಿದ ಈ ಜಗದಲಿ
ನಿಷ್ಕಲ್ಮಶ ತುಂಬಿದ ನಿನ್ನ ಸ್ನೇಹ, ಪ್ರೀತಿ,
ಎಂದೆಂದಿಗೂ ನನ್ನ ಜೊತೆಗಿರಲಿ ☆ ☆ ☆



ಶಿಲ್ಪ ಕೆ.ಎಸ್
II B.ed



**ಮಹಾಲಿಂಗ.ಕೆ.**
ಸಹ ಪ್ರಾಧ್ಯಾಪಕರು

# ಅಮ್ಮ ಬರೆದ ಡೈರಿ

ನಾನು ಎತ್ತಿ ಆಡಿಸಿ ಬೆಳೆಸಿದ ಮಗನೇ
ನೀನೀಗ ನನ್ನ ಎದೆಯೆತ್ತರಕ್ಕೆ ಬೆಳೆದು
ನಿಂತಿರುವೆ ಮುಂದೊಂದು ದಿನ ನನ್ನ
ವಿಷಯಕ್ಕೆ ತಲೆ ಹಾಕಬೇಡ ಎಂದು ಹೇಳಿಬಿಡುತ್ತೀಯೇನೋ
ಮರೆತು ಹಾಗೆಂದು ಹೇಳಬೇಡ
ಸಹಿಸುವ ಶಕ್ತಿ ನನಗಿಲ್ಲ ಮಗನೇ

ಚಿಕ್ಕವನಾಗಿದ್ದಾಗ ನೀ ಕೇಳಿದ ಎಲ್ಲಾ ಪ್ರಶ್ನೆಗೂ
ಉತ್ತರ ಕೊಟ್ಟಿರುವೆ ನಾನು ವಯಸ್ಸಾದ
ಮೇಲೆ ನಾನು ಹೀಗೆ ಕೇಳಿದರೆ ಬಾಯಿಮುಚ್ಚು
ಎಂದು ಮರೆತು ಗದರಬೇಡ ಅಮ್ಮ ಬೆದರಿ ನಿಂತಾಳು ಮಗನೇ

ಚಿಕ್ಕ ವಯಸ್ಸಿನಲ್ಲಿ ನೀ ತಿಂದು ಬಿಟ್ಟ ಅನ್ನವನ್ನು
ನಾನು ತಿಂದಿರುವೆ ಕೈ ನಡುಗುವ ಕಾಲದಲ್ಲಿ
ತಟ್ಟೆಯಿಂದ ನಾನು ಅನ್ನ ಚೆಲ್ಲಿದರೆ ಮರೆತು
ನನ್ನ ಬೈಯ್ಯಬೇಡ ಮಗನೇ ಆ ನನ್ನ
ಸಂಕಟ ಹೇಳಲಾಗದು ನಿನಗೆ

ವಯಸ್ಸಾದ ಮೇಲೆ ಮೂತ್ರಚೀಲ
ಜಾರಬಹುದು ಹನಿ ಹನಿ ತೊಟ್ಟಿಕ್ಕಬಹುದು
ಛೀ... ಎಂದು ಮುಖ ಸಿಂಡರಿಸಬೇಡ ಮಗನೇ
ನಿನ್ನ ಉಚ್ಚೆ ವರೆಸಿದ ವಾಸನೆ
ನನ್ನ ಸೆರಗಿನಲ್ಲಿ ಇನ್ನೂ ಇದೆ

ದೇಹ ಗಟ್ಟಿಯಾಗಿದ್ದಾಗಲೇ ಮಸಣಕ್ಕೆ
ಹೋಗಬೇಕೆಂಬ ಇಚ್ಛೆ ನನಗೇನೋ ಇದೆ ಮಗನೇ
ಹೆಚ್ಚು ದಿನ ಬದುಕಿದರೆ ಅಪ್ಪಿ ತಪ್ಪಿಯೂ ನನ್ನ ವೃದ್ಧಾಶ್ರಮಕ್ಕೆ ಅಟ್ಟಬೇಡ
ನಿನ್ನ ಬಿಟ್ಟು ಈ ಜೀವ ಬಿಡಲಾಗದು ಮಗನೇ

ನವಮಾಸಗಳು ನಿನಗೆ ರಕ್ತ ಕೊಟ್ಟವಳು ನಾನು
ನನ್ನ ರಕ್ತವನ್ನೇ ಹಾಲಾಗಿ ಕುಡಿಸಿದವಳು ನಾನು
ಮೈ ಬಲಿತ ಮೇಲೆ ನನ್ನ ಪರದೇಶಿಯಾಗಿ ಬಿಟ್ಟು ಹೋಗದಿರು
ನನ್ನ ರಕ್ತ ಒಣಗಿ ಹೋದಿತು ಮಗನೇ

ಪ್ರಾಣ ಹೋಗುವ ಕೊನೆಯ ಕ್ಷಣದವರೆಗೂ
ನನ್ನ ಬಳಿಯೇ ಇರು ಎಂದು ಕೂಗಿ ಕರೆಯುವೆ ಮಗನೇ
ಬೆನ್ನು ತಿರುಗಿಸಿ ಹೋಗಿಬಿಡಬೇಡ ನೀನು ನನ್ನನ್ನು ಪ್ರೀತಿಸುವೆ ಎಂಬುದು
ಕೇವಲ ನಂಬಿಕೆಯಲ್ಲ
ಮಕ್ಕಳು ಎಲ್ಲಾ ತಾಯಂದಿರ ಪ್ರಾಣಪಕ್ಷಿಯೆಂದು ಅರಿತುಕೊ ಮಗನೇ

ಇದನ್ನು ನೀನು ಓದಿ ಅಳುವೆ ಎಂದು ಗೊತ್ತು ನನಗೆ
ನೀ ಅತ್ತರೆ ನನ್ನ ಹೃದಯ ಬಿರಿಯುವುದು ಕರುಳ ಬಳ್ಳಿ ನಲುಗುವುದು
ನೀ ಅಳಬೇಡ ಮಗನೇ ।



ಅರ್ಚನ.ಎಲ್.ಎನ್.
ದ್ವಿತೀಯ ಬಿ.ಇಡಿ.

# ನಿಮಗಿದು ತಿಳಿದಿದೆಯೇ?

* ತುಕ್ಕು ಹಿಡಿಯದ ಏಕೈಕ ಲೋಹ ಚಿನ್ನ. ಅದು ಸಾವಿರಾರು ವರ್ಷಗಳಿಂದ ನೆಲದಲ್ಲಿ ಹೂತು ಹೋದರೂ ತುಕ್ಕು ಹಿಡಿಯುವುದಿಲ್ಲ.
* ಭಾರತವು ಜಪಾನ್‌ನನ್ನು ಹಿಂದಿಕ್ಕಿ ಈಗ ವಿಶ್ವದ ಎರಡನೇ ಅತಿದೊಡ್ಡ ಉಕ್ಕು ತಯಾರಕ ದೇಶವಾಗಿದೆ.
* ಬಿದಿರಿನ ತಿರುಳಿನಿಂದ ಕಾಗದವನ್ನು ಮೊದಲು ತಯಾರಿಸಿದವರು ಚೀನಿಯರು.
* ಭಾರತದಲ್ಲಿ ಅತೀ ಹೆಚ್ಚು ಜಿಲ್ಲೆಯನ್ನು ಹೊಂದಿರುವ ರಾಜ್ಯ ಉತ್ತರಪ್ರದೇಶ (75)
* ಅಮೆಜಾನ್ ಕಾಡನ್ನು ಜಗತ್ತಿನ 'ಶ್ವಾಸ ಕೋಶ' ಎಂದು ಕರೆಯಲಾಗುತ್ತದೆ. ಏಕೆಂದರೆ ಜಗತ್ತಿನ ಶೇ.20 ರಷ್ಟು ಆಮ್ಲಜನಕವು ಕೇವಲ ಈ ಒಂದು ಕಾಡಿನಿಂದ ಬಿಡುಗಡೆಯಾಗುತ್ತದೆ.
* ಸೌದಿ ಅರೇಬಿಯ ನದಿಗಳು ಇಲ್ಲದ ವಿಶ್ವದ ಅತಿದೊಡ್ಡದೇಶ.
* ಕನ್ಹಾ ಶಾಂತಿ ವನಂ ಇತ್ತೀಚಿಗೆ ಹೈದರಾಬಾದ್‌ನಲ್ಲಿ ತೆರೆಯಲಾದ 'ವಿಶ್ವದ ಅತಿ ದೊಡ್ಡ ಧ್ಯಾನ ಕೇಂದ್ರ'.
* ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ರೇಷ್ಮೆಯಲ್ಲಿ ಶೇ.85 ರಷ್ಟು ರೇಷ್ಮೆ ನಮ್ಮ ಕರ್ನಾಟಕದಲ್ಲೇ ಉತ್ಪಾದನೆಯಾಗುತ್ತದೆ.
* ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದ ಮೊದಲ ದೇಶ ನ್ಯೂಜಿಲ್ಯಾಂಡ್.



ನಿಶ್ಚಿತ.ಎಂ.ಎನ್.
ದ್ವಿತೀಯ ಬಿ.ಇಡಿ.

# ಜೀವನ ಎಂದರೇನು?

ಜೀವನ ಒಂದು ಆಹ್ವಾನ ಅದನ್ನು ಆಹ್ವಾನಿಸು
ಜೀವನ ಒಂದು ಕಾಣಿಕೆ ಅದನ್ನು ಸ್ವೀಕರಿಸು
ಜೀವನ ಒಂದು ಸಾಹಸ ಅದನ್ನು ಎದುರಿಸು
ಜೀವನ ಒಂದು ದುಃಖ ಅದರಿಂದ ಪಾರಾಗು
ಜೀವನ ಒಂದು ನಿಗೂಢತೆ ಅದನ್ನು ಅರಿ
ಜೀವನ ಒಂದು ಕರ್ತವ್ಯ ಅದನ್ನು ನೆರವೇರಿಸು
ಜೀವನ ಒಂದು ಸಂಗೀತ ಅದನ್ನು ಹಾಡು
ಜೀವನ ಒಂದು ಸದಾವಕಾಶ ಅದನ್ನು ಉಪಯೋಗಿಸು
ಜೀವನ ಒಂದು ಯಾತ್ರೆ ಅದನ್ನು ಪೂರ್ಣಗೊಳಿಸು
ಜೀವನ ಒಂದು ಕೊಟ್ಟ ಭಾಷೆ ಅದನ್ನು ಈಡೇರಿಸು
ಜೀವನ ಒಂದು ಕಗ್ಗಂಟು ಅದನ್ನು ಬಿಡಿಸು
ಜೀವನ ಒಂದು ಸೌಂದರ್ಯ ಅದನ್ನು ಆರಾಧಿಸು
ಜೀವನ ಒಂದು ಗುರಿ ಅದನ್ನು ತಲುಪು
ಜೀವನ ಒಂದು ಹೋರಾಟ ಅದನ್ನು ಧೈರ್ಯದಿಂದ ಹೋರಾಡು
ಜೀವನವೇ ಪ್ರೇಮ ಅದನ್ನು ಅನುಭವಿಸು
ಜೀವನ ದುಃಖಾಂತ ನಾಟಕ ಧೈರ್ಯದಿಂದ ಎದುರಿಸು



ನಿಶ್ಚಿತ.ಎಂ.ಎನ್.
ದ್ವಿತೀಯ ಬಿ.ಇಡಿ.

## ಸದಾ ನೆನಪಿನಲ್ಲಿಡಬೇಕಾದ 3 ವಿಷಯಗಳು

1. ಗೌರವಿಸಬೇಕಾದ ಮೂರು ವಿಷಯಗಳು
   – ತಂದೆ, ತಾಯಿ, ಗುರು
2. ಜಾಗ್ರತೆ ವಹಿಸಬೇಕಾದ ಮೂರು ವಿಷಯಗಳು
   – ಪತ್ನಿ, ಐಶ್ವರ್ಯ, ಬುದ್ಧಿವಂತಿಕೆ
3. ಮರೆಯಲಾಗದ ಮೂರು ವಿಷಯಗಳು
   – ಸಾಲ, ಕರ್ತವ್ಯ, ಖಾಯಿಲೆ
4. ನಿಯಂತ್ರಣದಲ್ಲಿಡಬೇಕಾದ ಮೂರು ವಿಷಯಗಳು
   – ಆಸೆ, ನಾಲಿಗೆ, ಕಾಮ
5. ಸಂತೋಷಕ್ಕಾಗಿ ಬಿಡಬೇಕಾದ ಮೂರು ವಿಷಯಗಳು
   – ಕೋಪ, ಅಸೂಯೆ, ಮತ್ಸರ
6. ದೂರವಿಡಬೇಕಾದ ಮೂರು ವಿಷಯಗಳು
   – ಕೆಟ್ಟವರ ಸಹವಾಸ, ಸ್ವಾರ್ಥ, ದುರುಳತನ
7. ಸಮೃದ್ಧಿ ಹೊಂದುವ ಮೂರು ವಿಷಯಗಳು
   – ದೇವರು, ವಿದ್ಯೆ, ಕಠಿಣ ಪರಿಶ್ರಮ
8. ಎಲ್ಲರೂ ಕಾಯಬೇಕಾದ ಮೂರು ವಿಷಯಗಳು
   – ಸಮಯ, ಸಾವು, ಗಿರಾಕಿ
9. ಅರಿವಿನ ಮೂರು ವಿಷಯಗಳು
   – ಕ್ಷಮೆ, ಮರೆಯುವಿಕೆ, ಗೆಳೆತನ
10. ಹಿಂದಕ್ಕೆ ಬಾರದ ಮೂರು ವಿಷಯಗಳು
   – ಕಳೆದು ಹೋದ ಸಮಯ, ಆಡಿದ ಮಾತು, ಹೋದ ಪ್ರಾಣ



ಶಾರದ.ಎಸ್.
ದ್ವಿತೀಯ ಬಿ.ಇಡಿ.

## ಮೂರು ಅಕ್ಷರದ "ಮಾನವ"

ಮನುಷ್ಯ ಎಂಬ ಮೂರು ಅಕ್ಷರದವರು
ಪ್ರಪಂಚ ಎಂಬ ಮೂರು ಅಕ್ಷರದಲ್ಲಿರುವ
ಆಸ್ಪತ್ರೆ ಎಂಬ ಮೂರು ಅಕ್ಷರದಲ್ಲಿ
ವೈದ್ಯರು ಎಂಬ ಮೂರು ಅಕ್ಷರದ ಸಹಾಯದಿಂದ
ಜಗತ್ತು ಎಂಬ ಮೂರು ಅಕ್ಷರಕ್ಕೆ ಕಾಲಿಡುತ್ತಾನೆ
ದೇವರು ಎಂಬ ಮೂರು ಅಕ್ಕರಕ್ಕೆ ಕೈ ಮುಗಿದು
ಪುಸ್ತಕ ಎಂಬ ಮೂರು ಅಕ್ಷರವನ್ನು ಹಿಡಿದು
ಶಿಕ್ಷಣ ಎಂಬ ಮೂರು ಅಕ್ಷರಕ್ಕೆ ಕಾಲಿಡುತ್ತಾನೆ, ಅಲ್ಲಿಯೂ
ಉತ್ತೀರ್ಣ ಎಂಬ ಮೂರು ಅಕ್ಷರವನ್ನು ಪಡೆಯುತ್ತಾನೆ
ಜೀವನ ಎಂಬ ಮೂರು ಅಕ್ಷರದಲ್ಲಿ
ಸಂತೋಷ ಎಂಬ ಮೂರು ಅಕ್ಷರದಿಂದ ಸಾಗುತ್ತಾನೆ ನಂತರ ಅವನಿಗೆ
ವಯಸ್ಸು ಎಂಬ ಮೂರು ಅಕ್ಷರವೂ ಹೆಚ್ಚಾದಾಗ
ಕೆಲಸ ಎಂಬ ಮೂರು ಅಕ್ಷರದಿಂದ
ನಿವೃತ್ತಿ ಎಂಬ ಮೂರು ಅಕ್ಷರನ ಪಡೆದು ತನ್ನ
ಜೀವನ ಎಂಬ ಮೂರು ಅಕ್ಷರ ಮುಗಿದಾಗ
ಮರಣ ಎಂಬ ಮೂರು ಅಕ್ಷರವನ್ನು ಹೊಂದಿ
ಸ್ಮಶಾಣ ಎಂಬ ಮೂರು ಅಕ್ಷರದಲ್ಲಿ
ತನ್ನ ಜೀವನ ಎಂಬ ಮೂರು ಅಕ್ಷರವನ್ನು
ಮಕ್ತಾಯ ಎಂಬ ಮೂರು ಅಕ್ಷರದಲ್ಲಿ ಮುಗಿಸುತ್ತಾನೆ.



**ಸತೀಶ್.ಎಂ.ವಿ.**
ಸಹ ಪ್ರಾಧ್ಯಾಪಕರು

# ಯುವಶಕ್ತಿಯೇ ದೇಶದ ಶಕ್ತಿ

"ಯುವಶಕ್ತಿಯೇ ದೇಶದ ಶಕ್ತಿ" ಎನ್ನುವ ಮಾತು ಇಂದು ಅನೇಕರಿಗೆ ಕೇವಲ ಘೋಷಣಾ ವಾಕ್ಯವಾಗಿ ಉಳಿದಿರಬಹುದು. ಆದರೆ ಇದು ಅರ್ಥಪೂರ್ಣ ನುಡಿಮುತ್ತು. ಭರವಸೆಯ ಭವಿಷ್ಯದ ಕನಸು ಹೊತ್ತ ಯುವ-ಪೀಳಿಗೆಯಿಂದ ಪ್ರತಿಯೊಂದು ದೇಶ, ಸಮಾಜ ಬದಲಾವಣೆಯನ್ನು ನಿರೀಕ್ಷಿಸುವುದು ಸಹಜ.

ಪ್ರಸ್ತುತ ನಮ್ಮ ಸಮಾಜದಲ್ಲಿನ ಪರಿಸ್ಥಿತಿ ಹೇಗಿದೆ? ಯುವಶಕ್ತಿ ಕ್ರಿಯಾತ್ಮಕವಾಗಿದೆಯೇ? ಸಮೃದ್ಧವಾದ ಆರೋಗ್ಯಕರವಾದ ಬಲಿಷ್ಠ ದೇಶದ ನಿರ್ಮಾಣಕ್ಕೆ ಪೂರಕವಾಗಿ ಬೆಳೆಯುತ್ತಿದೆಯೇ? ಇತ್ತೀಚಿನ ದಿನಗಳಲ್ಲಿ ಸಮೂಹ ಮಾಧ್ಯಮಗಳನ್ನು ವೀಕ್ಷಿಸುವಾಗ ಯುವಶಕ್ತಿಗಳ ದೃಷ್ಟಿಕೋನಗಳು ನಮ್ಮ ತಲೆತಗ್ಗಿಸುವುದು ಸಹಜವಾಗಿಬಿಟ್ಟಿದೆ. ಇಂದಿನ ಯುವಜನತೆ ತಮ್ಮ ಬದುಕಿನ ಭರವಸೆ, ಆಸಕ್ತಿಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ವಿದ್ಯಾವಂತ ಯುವಜನರೇ ಸೋಮಾರಿಗಳಾಗಿ ದೇಶದ ಶಕ್ತಿಯಾಗುವ ಬದಲು ದೇಶಕ್ಕೆ ಕಂಟಕಪ್ರಾಯರಾಗಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಯುವಶಕ್ತಿಯು ನಿಷ್ಕ್ರಿಯವಾಗಿರುವುದು ಗೋಚರ. ಇದಕ್ಕೆ ಕಾರಣ ಆಧುನಿಕ ಯುಗದಲ್ಲಿ ನಾವು ರೂಢಿಸಿಕೊಂಡಿರುವ ಜೀವನಶೈಲಿ. ಆದರೆ ಜೀವನಶೈಲಿಯನ್ನು ಹೀಯಾಳಿಸುತ್ತಾ ಕುಳಿತರೆ 'ಯುವಶಕ್ತಿಯೇ ದೇಶದ ಶಕ್ತಿ" ಘೋಷಣೆಯಾಗಿಯೇ ಉಳಿಯುತ್ತದೆ. ನಮ್ಮ ಗುರಿಯನ್ನು ಸಾಧಿಸುವಲ್ಲಿ ನಾವು ಎಲ್ಲಿಯಾದರೂ ದಾರಿ ತಪ್ಪಿದ್ದೇವೆಯೇ? ನಮ್ಮ ದೇಶದ ಬಗ್ಗೆ ನಾವು ಬೆಳೆಸಿಕೊಂಡಿರುವ ದೃಷ್ಟಿಕೋನ ಏನು? ಎಂದು ಪ್ರತಿಯೊಬ್ಬನೂ ವಿಮರ್ಶೆ ಮಾಡಿಕೊಂಡು ಸರಿಯಾದ ದಿಕ್ಕಿನತ್ತ ಸಾಗುವುದು ಸೂಕ್ತ.

ಆತ್ಮವಿಶ್ವಾಸವಿರುವ ಮನುಷ್ಯ ಮಹತ್ತರವಾದುದನ್ನು ಸಾಧಿಸುತ್ತಾನೆ. ಕಷ್ಟ-ಸುಖಗಳು ಎನ್ನುವುದು ಎಲ್ಲರ ಬದುಕಿನಲ್ಲೂ ಬಂದು ಹೋಗುತ್ತವೆ. ಕಷ್ಟ ಬಂದಾಗ ಎದೆಗುಂದದೆ ಧೈರ್ಯದಿಂದ ಎದುರಿಸುವ 'ಆತ್ಮವಿಶ್ವಾಸ' ಎಂಬ ಅಸ್ತ್ರವನ್ನು ಬಳಸಿಕೊಂಡು ತಮ್ಮ ಶಕ್ತಿಯನ್ನು ಬಲಿಷ್ಠ, ಆರೋಗ್ಯಕರ ದೇಶವನ್ನು ಕಟ್ಟುವಲ್ಲಿ ಸದುಪಯೋಗ ಪಡಿಸಿಕೊಂಡಿದ್ದೇ ಆದಲ್ಲಿ ನಮ್ಮ ದೇಶ ವಿಶ್ವದಲ್ಲೇ ಆರೋಗ್ಯಕರವಾದ ಬಲಿಷ್ಠ ರಾಷ್ಟ್ರವಾಗಿ ಬೆಳೆಯುವುದರಲ್ಲಿ ಸಂದೇಹವಿಲ್ಲ. ([illegible])

ಆತ್ಮವಿಶ್ವಾಸವೆನ್ನುವುದು ಜೀವನದ ಅತ್ಯುತ್ತಮ ಸಂಗಾತಿ. - ಗಯಟೆ.



**ಅಂಬಿಕಾ.ಹೆಚ್.ಕೆ.**
ಪ್ರಥಮ ಬಿ.ಇಡಿ.

## ಚಿನ್ನದಂಥ ಸಾಲುಗಳು

ಕರೆಯದವರ ಮನೆಗೆ
ಊಟಕ್ಕೆ ಹೋಗಬೇಡ
ಕರುಣೆ ಇಲ್ಲದವರ
ಹತ್ತಿರ ಕಷ್ಟವನ್ನು ಹೇಳಬೇಡ

ಬಂದ ಭಾಗ್ಯವನು
ಕಾಲಲ್ಲಿ ಒದೆಯಬೇಡ
ಹಸಿವಿರದವನಿಗೆ ಒತ್ತಾಯದ
ಊಟ ಬಡಿಸಬೇಡ

ಹೃದಯಹೀನರ ಹತ್ತಿರ
ಪ್ರೀತಿ ಭಿಕ್ಷೆ ಬೇಡಬೇಡ
ಹೆತ್ತವರೆದುರು ಎದೆಗೊಟ್ಟು
ಮಾತನಾಡಬೇಡ

ಕಂಡವರ ಎದುರಿಗೆ
ಹೆಂಡತಿಯ ನಿಂದಿಸಬೇಡ
ಗುರುಹಿರಿಯರ ಮಾತಿಗೆ
ಎದುರುತ್ತರ ಕೊಡಬೇಡ

ಅಸಹಾಕರ ಸ್ಥಿತಿಯ
ಕಂಡು ನಗಬೇಡ
ಸ್ನೇಹಿತನನ್ನು ನಂಬಿಸಿ
ಬೆನ್ನಿಗೆ ಚೂರಿ ಇರಿಯಬೇಡ

ಬಾಯಾರಿದಾಗ ನೀರುಕೊಟ್ಟ
ಮನೆಯನು ಮರೆಯಬೇಡ
ಯಾರನ್ನು ಅತಿಯಾಗಿ ನಂಬಿ
ಮೋಸಹೋಗಬೇಡ

ನದಿಯಮೂಲ ಹುಡುಕುವ
ತಂಟೆಗೆ ಹೋಗಬೇಡ
ದೇವರಿಲ್ಲವೆಂದು ಹುಚ್ಚುವಾದ
ಮಾಡಬೇಡ



# ಗೆಲುವಿನ ರಹಸ್ಯ

**ಶ್ವೇತಾ.ಆರ್.ಎಂ.**

ದ್ವಿತೀಯ ಬಿ.ಇಡಿ.

* ಏನನ್ನಾದರೂ ಸಾಧಿಸಬೇಕೆಂಬ ಅಪೇಕ್ಷೆಯನ್ನು ಹೊಂದಿರು
* ನಿನ್ನಲ್ಲಿಯ ಬಲವಾದ ಅಂಶಗಳನ್ನು ಗುರುತಿಸಿ ಅವುಗಳನ್ನು ಸಂಪೂರ್ಣವಾಗಿ ಸದ್ವಿನಿಯೋಗಿಸು.
* ಎಲ್ಲಾ ವಿಷಯಗಳಲ್ಲೂ ಸರಿಯಾಗಿರು.
* ಜೀವನದಲ್ಲಿ ಆಶಾವಾದಿಯಾಗಿರು.
* ನಿನ್ನ ಮನಸ್ಸನ್ನು ದುರಾಲೋಚನೆಗಳಿಂದ ದೂರವಿಡು.
* ಆತ್ಮ ವಿಶ್ವಾಸವಿಲ್ಲದವನಾಗಬೇಡ.
* ಎಲ್ಲರೊಂದಿಗೆ ಸರಳವಾಗಿ ನಡೆದುಕೋ.
* ನಿನ್ನ ಮೇಲೆ ನಂಬಿಕೆ ಬೆಳೆಸಿಕೊ, ನಿನ್ನ ಸಾಮರ್ಥ್ಯದ ಮೇಲೆ ವಿಶ್ವಾಸವಿಡು.
* ಹತ್ತರ ಜೊತೆ ಹನ್ನೊಂದಾಗದೆ ಸ್ವಂತ ವ್ಯಕ್ತಿತ್ವ ಬೆಳೆಸಿಕೊ.
* ಅವಕಾಶ ದೊರೆತಾಗ ನಿನ್ನ ಅಲೋಚನೆಗಳನ್ನು ಕಾರ್ಯರೂಪಕ್ಕೆ ತಂದು ಪರೀಕ್ಷಿಸು.
* ಸಾಧ್ಯವಾದಷ್ಟು ಪ್ರವಾಸ ಮಾಡು.
* ಎದೆಗುಂದಬೇಡ, ಅಧೈರ್ಯಕ್ಕೆ ಶರಣಾಗಬೇಡ.
* ಶಕ್ತಿಯನ್ನು ಮತ್ತೆ ಸಂಚಯಿಸುವ ಕಲೆಯನ್ನು ಹೊಂದು.
* ಸಮಯ ದೊರೆತಾಗ ಹೊಸ ವಿಷಯಗಳನ್ನು ತಿಳಿದುಕೊ.
* ಪ್ರಶ್ನೆಗಳನ್ನು ಕೇಳುವ ನೈಪುಣ್ಯವನ್ನು ಸಂಪಾದಿಸು.
* ಎಲ್ಲರೊಂದಿಗೆ ಉಲ್ಲಾಸವಾಗಿರಲು ಕಲಿ.

# ಶುಭ ನುಡಿ

Tunga
II B.ed

ಸೋತೆ ಎಂದು ನೀ ಮುಂದಿಟ್ಟ
ಹೆಜ್ಜೆ ಹಿಂದಿಡಬೇಡ...
ಏಕೆಂದರೆ...
ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ
ಇತಿಹಾಸವನ್ನೇ ಸೃಷ್ಟಿ ಮಾಡುವ
ಹೆಜ್ಜೆಯಾಗಬಹುದು...

ನಿನ್ನ ಮೇಲೆಯೇ ನೀನು ನಂಬಿಕೆ
ಇಟ್ಟು ದೊಡ್ಡದಾಗ ಕನಸು ಕಂಡಾಗ
ಏನನ್ನಾದರೂ ಸಾಧಿಸಬಹುದು.

ಪ್ರಯತ್ನ ಯಾವತ್ತೂ ವ್ಯರ್ಥವಾಗಲ್ಲ.
ನಿನ್ನ ಕೆಲಸವನ್ನು ನೀನು ಪ್ರಾಮಾ
-ಣಿಕವಾಗಿ ಮಾಡು ಪ್ರತಿಫಲ ತಾನಾಗಿಯೇ
ನಿನ್ನನ್ನು ಹುಡುಕಿಕೊಂಡು ಬರುತ್ತದೆ....



**ತುಂಗ.ಪಿ.ಆರ್**
**ದ್ವಿತೀಯ ಬಿ.ಇಡಿ.**

Tunga P.R

# ಕೆಲವು ಜಿಲ್ಲೆಗಳಿಗಿರುವ ವಿಶೇಷ ಹೆಸರುಗಳು

| | | |
|---|---|---|
| 1 | ವಿಜಯಪುರ | ಗುಮ್ಮಟ ನಗರಿ |
| 2 | ಬಾಗಲಕೋಟೆ | ಕೋಟೆನಾಡು |
| 3 | ರಾಯಚೂರು | ಎಡದೊರೆ ನಾಡು |
| 4 | ಬಳ್ಳಾರಿ | ಬಿಸಿಲಿನ ನಗರಿ |
| 5 | ಗದಗ | ಮುದ್ರಣ ನಗರಿ |
| 6 | ಧಾರವಾಡ | ವಿದ್ಯಾನಗರಿ |
| 7 | ಬೆಳಗಾವಿ | ಕುಂದಾನಗರಿ |
| 8 | ದಾವಣಗೆರೆ | ಬೆಣ್ಣೆನಗರಿ |
| 9 | ಚಿತ್ರದುರ್ಗ | ದುರ್ಗದ ನಾಡು |
| 10 | ತುಮಕೂರು | ಕಲ್ಪತರು ನಾಡು |
| 11 | ಮಂಡ್ಯ | ಸಕ್ಕರೆ ನಾಡು |
| 12 | ಮಂಗಳೂರು | ಬಂದರು ನಗರಿ |
| 13 | ಉಡುಪಿ | ಕೃಷ್ಣನಗರಿ |
| 14 | ಚಿಕ್ಕಮಗಳೂರು | ಕಾಫಿನಾಡು |
| 15 | ಕೋಲಾರ | ಚಿನ್ನದ ನಾಡು |
| 16 | ಕೊಡಗು | ಮಂಜಿನ ನಗರಿ |
| 17 | ಬೆಂಗಳೂರು | ಉದ್ಯಾನ ನಗರಿ |
| 18 | ಮೈಸೂರು | ಮಲ್ಲಿಗೆ ನಗರಿ |
| 19 | ಶಿವಮೊಗ್ಗ | ಮಲೆನಾಡ ಹೆಬ್ಬಾಗಿಲು |

Nischitha.m.n



ಚಾಂದಿನಿ. ಎ
ದ್ವಿತೀಯ ಬಿ.ಇಡಿ.


## ನಿತ್ಯ ಸತ್ಯ


ಆಸೆ ಇದ್ದಾಗ ನಿರಾಸೆ ಇದ್ದೆ ಇರುತ್ತದೆ
ಪ್ರೀತಿ ಇದ್ದಾಗ ಜಗಳ ಇದ್ದೆ ಇರುತ್ತದೆ
ಜನನ ಇದ್ದಾಗ ಮರಣವು ಇದ್ದೆ ಇರುತ್ತದೆ
ಪ್ರತಿಭೆ ಇದ್ದಾಗ ಅದಕ್ಕೆ ತಕ್ಕ ಪುರಸ್ಕಾರವು ಇದ್ದೇ ಇರುತ್ತದೆ.


# ENGLISH SECTION

1. Artistic writing about the Education and Theme
for National Science day - 2023 - 79
2.Work More Talk Less - 81
3. Subhash Chandra Bose - 82
4. World Day of Social Justice - 83
5. Value of Time - 84
6. About English Language - 85




Education is the most powerful weapon which you can use to change the world.
WORLD
LITRACY
DHANUSHA.N
II nd B.Ed


Theme for National Science doy
2023
Global Science for Global Wellbeing
The National Science Day-2023 theme is Global science for Global wellbeing emphasising the importance of Scientific oresearch and innovation in address-ing global challenges and promoting human well-being and cooperation among various stakeholders for issues like climate change, Sustainable development and public health.
Dhanusha.N
II nd B.Ed


NATIONAL SCIENCE DAY
CO2
O2
E=Mc2
H2O
He
NATIONAL SCIENCE DAY 28th FEB
National science day is celebrated to mark the discovery of the "Raman Effect" by the Indian phycist Sir C V Raman in 1928.
Theme for national science Day 2023
Global Science For Global Wellbeing
Dhanusha.N
IInd B.Ed

# WORK MORE, TALK LESS

Time is like money; we should make the most use of it. we should not waste it in idle and useless talk; more words do not help us to raise high in life, Life is action; so we should work day and night. life without work is meaningless and unsuccessfull." HARDWORK IS KEY TO SUCCESS," great hights can not be attained through talks alone, It is through hard work and sincere efforts that we can hope to make progress in life." WORK IS WORSHIP", The more we work, the more we achieve, we should remember that work done in the right direction never goes unrewarded, so we should work more and talk less,

Shwetha R.M
IInd BE.d

# Subhash Chandra Bose

* One individual may die for an idea, but that idea will, after his death, incarnate itself in a thousand lives.

* Give me blood, and I will give you freedom

* Life loses half its interest if there is no struggle - if there are no risks to be taken.

* Men, money and materials cannot by themselves bring victory or freedom. we must have the motive - power that will inspire us to do brave deeds and heroic exploits.

* Freedom is not given, it is Taken.



Harshitha. M.K
II B.Ed.

# WORLD DAY OF SOCIAL JUSTICE



World day of social justice is observed every year on February 20 with the objective to raise a voice aganist social injustice.

"The united Nations general assembly" has decided to observe 20 February annually, approved on 26 November 2007 and starting in 2009, as the world Day of social justice.

## 2023 Theme.

This year's theme focuses on the recommen-dations of our common Agenda to strengthen global solidarity and to re-build trust in gover-nment by " Overcoming barriers and Unleashing opportunities for Social Justice".

Sahana. H. N
IInd B. Ed.

# VALUE OF TIME

TO Realize the value of one year
ASK a student who failed a grade

TO Realize the value of one month
ASK a mother who gave birth to a baby

TO Realize the value of one week
ASK an editor of a weekly newspaper

TO Realize the value of one hour
ASK the Lovers who are waiting
to meet

TO Realize the value of one minute
ASK the person who missed the train

TO Realize the value of one second
ASK a person who just avoided
an accident

TO Realize the value of one milli
second.
ASK a person who won a silver
Medal in the olympics



by. vidya.H.V I B.Ed.

About English language:- English is a West Germanic languge in the Indo European language family modern English is both the most spoken languge in the world and the Third most spoken native language after mandarine, chinese and spanish. It is also the most widly learned second language in the world, with more second language speakers than native speakers.

Now English is become as library language, window of the world, trade and business language, International language and official language in 58 countries and 31 non-severeign entities and in various international organizations like IMF, NATO, WTO, UNO, UNESCO, SAARC etc. Now English is speaking all over the world in two accent such as British English and American English respectively It is the most commonly spoken language in the world with over a quarter of the world speaking the language. there's always some one to practice with.

let us learn English
let us understand English
let us communicate English



Join your hands mind and soul to develop LSRW skills in English.

Mahadeva Swamy.S
Assistant Professor.

# ಚಿತ್ರ ಕಲೆ ವಿಭಾಗ








Art by
Rashmi M.K






Keerthanashree K.N
I st. B.ed

Keerthanashree. K.N. I B.Ed